ಓಂ ಶ್ರೀ ಗುರು ಬಸವಲಿಂಗಾಯ ನಮಃ

866666


# ಕಲ್ಯಾಣ ಕಿರಣ

ಶರಣರ ನಡೆ ಮುಕ್ತಿಯ ಕಡೆ

ಏಪ್ರಿಲ್ - 2016 ಬೆಲೆ - 20/-



ಶೂನ್ಯ ಪೀಠಾಧೀಶರು ಅಲ್ಲಮ ಪ್ರಭುದೇವರು






## ಶರಣು ಶರಣಾರ್ಥಿ

ಬಸವನಾ ಒಲವಿನಿಂದ ಕಾಯ
ದೇಗುಲವಾಯ್ತು, ಕಾಯಕ ಕೈಲಾಸವಾಯ್ತು,
ಬಸವನಾ ಅರಿವಿನಿಂದ.

ಕಾಯದ ಮಹಿಮೆ ಅರಿದೆನಯ್ಯಾ ಕಾಯವ
ದುಡಿಸಿ, ಇಲ್ಲಿ ಸಲ್ಲಿದೆನಯ್ಯಾ, ಕಾಯವನು
ತೊರೆದ ಬಳಿಕ ಅಲ್ಲಿಯೂ ಸಲ್ಲುವಂತೆ ಮಾಡಾ
ಎನ್ನ ತಂದೆ ಶಿವ ಬಸವ ದೇವಾ..!

– ಶಿವಾನಂದ ಕಲಗೊಂಡ

## ಏಪ್ರಿಲ್ - ಮೇ

### ಹಬ್ಬ, ಹುಣ್ಣಿಮೆಗಳು

ಚಾಂದ್ರಮಾನ ಯುಗಾದಿ-ಏ.8
ಅಂಗಾಯತ ಗಣಮೇಳ - ಏ.8,9,10
ಅಕ್ಕಮಹಾದೇವಿ ಜಯಂತಿ -ಏ.22
ಹರಳಯ್ಯ ಜಯಂತಿ - ಏ.22

ಕಾಯಕ ದಿನಾಚರಣೆ - ಮೇ.01
ಮಡಿವಾಳ ಮಾಚಿದೇವ ಜಯಂತಿ-ಮೇ.1
ಬಸವ ಜಯಂತಿ -ಮೇ.9
ಶರಣೋತ್ಸವ - 21, 22, 23

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ.
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ.
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ.
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಬಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||
888666

ಸಂಪುಟ – 42 ಬಸವ ಶಕೆ – 882
ಸಂಚಿಕೆ – 04 ಏಪ್ರಿಲ್ – 2016






Kalyana Kirana-R.No.19988/70. Monthly Magzine
Edited and published by Pujya kasthuridevi on behalf of Vishva Kalyana Mission chratible trust, Basava Mantapa, 2035, 20th main, 2nd block, Rajajinagar Bangalore -560010.

Ph: 080-23131476. SMS-9945806297.
E-mail: kalyanakirana1970@gmail.coma

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

# ವಿಶ್ವಗುರು ಬಸವಣ್ಣನವರ 883ನೆಯ ಜಯಂತಿ ಉತ್ಸವ

## ಶಿವ(ಸೋಮ)ವಾರ, ದಿ.09-05-2016 ರಂದು

## ವೇಳೆ : ಬೆಳಿಗ್ಗೆ 10-30

## ಸ್ಥಳ : ಬಸವ ಮಂಟಪ, ರಾಜಾಜಿನಗರ

## ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಬಸವ ಧರ್ಮ ಪೀಠ, ಕೂಡಲ ಸಂಗಮ



★ ಸರ್ವರಿಗೂ ಆದರದ ಸುಸ್ವಾಗತ ★

ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ, ಎರಡನೆಯ ವಿಭಾಗ
ರಾಜಾಜಿ ನಗರ, ಬೆಂಗಳೂರು-560010
ದೂರವಾಣಿ : 080-22923736, 23131476





ಜಯ ಬಸವರಾಜ ಭಕ್ತ ಜನ ಸುರಭೂಜ
ಜಯತು ಮಹಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾ ಸಿಂಧು ಭಜಕಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀ ಗುರು ಬಸವ

# ವಿಶ್ವ ಗುರು ಬಸವಣ್ಣನವರ 883ನೆಯ ಜಯಂತಿ ಉತ್ಸವ

1. ಬಸವೇಶ್ವರ ಪೂಜಾ ವ್ರತ ಮತ್ತು ಪುಷ್ಪಾರ್ಚನೆ- ಬೆಳಗ್ಗೆ 8-00ರಿಂದ 2. ತೊಟ್ಟಲು ಮತ್ತು ಆರತಿ
3. ಉಪನ್ಯಾಸ - 10-30 4. ಪ್ರಸಾದ ವಿತರಣೆ, 5.ಮೆರವಣಿಗೆ

## ವಿಶೇಷ ಸೂಚನೆ

★ ಪುಷ್ಪಾರ್ಚನೆಗೆ ಅನೇಕ ಜನ ಶರಣ ಬಂಧುಗಳಿಗೆ ಅವಕಾಶವಿದೆ. ಏನಾದರೂ ಅಪೇಕ್ಷೆಗಳಿದ್ದರೆ ಅವುಗಳ ಪೂರೈಕೆಗಾಗಿ ಸಂಕಲ್ಪ ಮಾಡಿ ಪುಷ್ಪಾರ್ಚನೆ ಮಾಡಬಹುದು.

★ ಅನೇಕ ಗಣ್ಯರು, ಉಪನ್ಯಾಸಕರು, ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಉಪನ್ಯಾಸ ನೀಡಲಿದ್ದಾರೆ.

★ ಕಾರ್ಯಕ್ರಮದ ನಂತರ ಪ್ರಸಾದ ದಾಸೋಹವಿರುತ್ತದೆ.

★ ಮಹಾಪ್ರಸಾದ(ಊಟ)ದಾಸೋಹಕ್ಕೆ ದೇಣಿಗೆ, ಪ್ರಸಾದ ಸಾಮಗ್ರಿ ನೀಡಲು ಅವಕಾಶ ಉಂಟು. ಬಸವ ಮಂಟಪದ ಕಾರ್ಯಕ್ರಮದಲ್ಲಿ ಭಾಗಿಗಳಾದವರಿಗೆ ಮಾತ್ರವಲ್ಲದೆ ಸಾರ್ವಜನಿಕವಾಗಿಯೂ ಪ್ರಸಾದ ವಿತರಣೆ ಏರ್ಪಡಿಸಲಾಗಿದೆ.

## ಮೆರವಣಿಗೆ

ಪ್ರಸಾದ ವಿತರಣೆಯ ಬಳಿಕ ಮಧ್ಯಾಹ್ನ 4-00ರಿಂದ ಮೆರವಣಿಗೆಯು ಬಸವ ಮಂಟಪದಿಂದ ಹೊರಟು ನವರಂಗ್ ಟಾಕೀಸ್, ಭಾಷ್ಯಂ ಸರ್ಕಲ್, ಇ.ಎಸ್.ಐ ಮಾರ್ಗವಾಗಿ ಸಾಗಿ ಪುನಃ ಬಸವ ಮಂಟಪದಲ್ಲೇ ಪೂರ್ಣಗೊಳ್ಳುವುದು. ಶ್ರೀ ಗುರು ಬಸವಣ್ಣನವರ ಭಾವಚಿತ್ರದೊಡನೆ ನಡೆಯುವ ಪಥ ಸಂಚಲನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಶರಣೆಯರು ಭಾಗವಹಿಸಿ, ಪಥ ಸಂಚಲನ ಮಾಡಲು ಕೋರುತ್ತೇವೆ. ಬಿಳಿಯ ವಸ್ತ್ರಗಳನ್ನು ಧರಿಸಿ, ಕಾವಿಯ ಸ್ಕಾರ್ಫ್ ಹೊದ್ದು ಶೋಭೆ ತರಬೇಕೆಂದು ವಿನಂತಿಸುತ್ತೇವೆ.

★ <u>ವಿಶೇಷ ಕೋರಿಕೆ:</u> ಬಸವ ಜಯಂತಿಯು ಅತ್ಯಂತ ಪವಿತ್ರವಾದ ಹಬ್ಬ. ಶರಣ ಬಂಧುಗಳು ಮದುವೆ, ಗೃಹ ಪ್ರವೇಶ, ಅಂಗಡಿ ಪ್ರಾರಂಭೋತ್ಸವ ಮುಂತಾದವುಗಳನ್ನು ಇಟ್ಟುಕೊಂಡು ಕಾರ್ಯಕ್ರಮದಲ್ಲಿ ಭಾಗಿಯಾಗುವುದನ್ನು ಬಿಡಬಾರದು. ಅಂದು ಅತ್ಯಂತ ಶುಭದಿನವಾದ್ದರಿಂದ ಗೃಹ ಪ್ರವೇಶ, ಅಂಗಡಿ ಪ್ರಾರಂಭೋತ್ಸವ ಮುಂತಾಗಿ ಸಂಕ್ಷಿಪ್ತವಾಗಿ ಬೆಳಗಿನ ಹೊತ್ತು ಬಸವೇಶ್ವರ ಪೂಜಾವ್ರತದೊಡನೆ ಪೂರೈಸಿ, ಮತ್ತೊಂದು ದಿವಸ ಸ್ನೇಹಿತರು, ಬಂಧು ಮಿತ್ರರನ್ನು ಆಹ್ವಾನಿಸಿ ಸಾರ್ವಜನಿಕವಾಗಿ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಿ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ದಿವ್ಯ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಬಸವ ಜಯಂತಿಯ ಈ ಪವಿತ್ರ ಕಾರ್ಯಕ್ರಮದಲ್ಲಿ ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರೂ ಭಾಗಿಗಳಾಗಬೇಕೆಂದು, ತನು, ಮನ, ಧನಗಳಿಂದ ಸಹಕರಿಸಬೇಕೆಂದು ಆಶಿಸುತ್ತೇವೆ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666



ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ(ರಿ.)
ಉಳವಿ ರಸ್ತೆ, ಧಾರವಾಡ ಸಂಸ್ಥೆಯಿಂದ

# ಶರಣೋತ್ಸವ ಕಾರ್ಯಕ್ರಮ



## 2016, ಮೇ 21, 22 ಮತ್ತು 23ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟಳು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ-ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ -ಪ್ರವಚನದ ನಂತರ ಪ್ರಸಾದ ದಾಸೋಹವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲನವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ -ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಶ್ರಮವನ್ನು ನಡೆಸಲಾಗುತ್ತಿದೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಜಂಗಮ ಮೂರ್ತಿ ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ,





ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆಯಾದರೂ 2010ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.21ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 4-30ರಿಂದ ಧರ್ಮಚಿಂತನಗೋಷ್ಠಿ. ದಿ.22 ಭಾನು(ದೇವ)ವಾರದಂದು ಬೆಳಿಗ್ಗೆ 10-30ರಿಂದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ಸಂಜೆ 5-00ರಿಂದ ಸಾಂಸ್ಕೃತಿಕ ಕಾರ್ಯಕ್ರಮ. ಸೋಮ(ಶಿವ) ವಾರ ದಿ.23ರಂದು ಬೆಳಿಗ್ಗೆ ವಿಶೇಷ ಪೂಜೆ. 10-30ರಿಂದ ಪೀಠಾರೋಹಣದ 47ನೆಯ ವಾರ್ಷಿಕೋತ್ಸವ, ನಂತರ ಮೆರವಣಿಗೆ, ಸಮಾರೋಪ ಸಮಾರಂಭ.

3 ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಆದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

| | | | |
|---|---|---|---|
| ಮಹಾಪೋಷಕರು | 5000ರೂ | ಹಿತೈಷಿಗಳು | 500ರೂ |
| ಪೋಷಕರು | 3000ರೂ | ವಿಶೇಷ ಸದಸ್ಯರು | 250ರೂ |
| ದಾನಿಗಳು | 1000ರೂ | ಸಾಮಾನ್ಯ ಸದಸ್ಯರು | 150ರೂ |

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಶರಣ. ಸಿದ್ದಣ್ಣ ನಟೇಗಲ್
ಅಧ್ಯಕ್ಷರು , ರಾಷ್ಟ್ರೀಯ ಬಸವ ದಳ, ಧಾರವಾಡ
ಶರಣ. ಡಿ.ಬಿ.ಗೌಡರು, ಧಾರವಾಡ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ
ಶರಣ. ಕಲ್ಯಾಣಪ್ಪ ಪರಮಾದಿ
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ
ಶರಣ. ಶಿವಕುಮಾರ ಕಟಗಿ
ಸಂಘಟಕರು, ರಾಷ್ಟ್ರೀಯ ಬಸವ ದಳ, ಧಾರವಾಡ
ಶರಣ. ದೇವೇಂದ್ರಪ್ಪ ಇಂಗಳಳ್ಳಿ
ಕಾರ್ಯದರ್ಶಿ, ರಾ.ಬ.ದಳ,ಧಾರವಾಡ
ಶರಣ. ರವಿಕುಮಾರ್ ಕಗ್ಗಣ್ಣನವರು
ಪತ್ರಿಕಾ ಪ್ರಚಾರ ಕಾರ್ಯದರ್ಶಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ
ಧಾರವಾಡ -580003, ದೂ: 0836-3204121
ಶರಣ. ಬಸವರಾಜ ಲಿಂಗಶೆಟ್ಟರು
ಅಧ್ಯಕ್ಷರು, ಲಿಂ.ಧ.ಮಹಾಸಭಾ, ಹುಬ್ಬಳ್ಳಿ
ಶರಣ. ಕರಿಬಸಪ್ಪ ಕೋರಿಶೆಟ್ಟರು
ಅಧ್ಯಕ್ಷರು, ಯುವ ರಾಷ್ಟ್ರೀಯ ಬಸವ ದಳ
ಮೊ : 9008202994/ 9341334828
ಸ್ವಾಗತ ಸಮಿತಿಯ ಅಧ್ಯಕ್ಷರು
ಶರಣ. ಬಿ.ಜಿ.ಹೊಸಗೌಡರು
ಉಪಾಧ್ಯಕ್ಷರು : ಶರಣ. ಸೂರ್ಯಕಾಂತ ಶೀಲವಂತರು

# ಅಕ್ಕನ ಅಮರವಾಣಿ ಭಾಗ-28



(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಹೀಗೆ ಸಂಬಂಧಿಸಿದ ಕಾಯದ ಪೂರ್ವಾಶ್ರಯವ ನಿರ್ಮೂಲನೆ ಮಾಡಿ, ತನ್ನ ಮೂಲನೆಲೆಯಾದ ಲಿಂಗದೇವನನ್ನು ಅಂಗ(ಆತ್ಮ)ವು ಸೇರಲುಬೇಕಾದ ಉಪಾಯವನ್ನು ದೇವನು ನೀಡುವನು. ಆ ಉಪಾಯವೆಂದರೆ ಭಕ್ತನನ್ನು ಭವದಿಂದ ಬಿಡುಗಡೆ ಮಾಡಲು ತಾನೇ ಗುರುವಾಗಿ ಬರುವನು. ಇಷ್ಟಲಿಂಗವನ್ನು ಅನುಗ್ರಹಿಸಿಕೊಡುವನು. ಬ್ರಹ್ಮಾಂಡವನ್ನು ತುಂಬಿರುವ ಮಹಾಲಿಂಗವೇ ಗೋಳಾಕಾರದ ಇಷ್ಟಲಿಂಗವಾಗಿ ಕೈಗೆ ಬರುವುದು. ಅದರ ಅರ್ಚನೆ, ಪ್ರಾರ್ಥನೆ ಮತ್ತು ಧ್ಯಾನವು ತ್ರಿಕರಣಗಳಿಂದಲೂ ನಡೆಯುವುದು. ಪಂಚಭೂತಾತ್ಮಕ ಶರೀರವು ದೈವೀಕರಣಗೊಳ್ಳುವುದು. ಷಡಂಗಗಳಾದ ಭೂಮ್ಯಾಂಗ, ಜಲಾಂಗ, ಅನಲಾಂಗ, ವಾಯ್ವಂಗ, ವ್ಯೋಮಾಂಗ, ಆತ್ಮಾಂಗಗಳು ದೈವೀಕರಣಗೊಳ್ಳುವುವು. ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ, ಚಿಚ್ಛಕ್ತಿ, ಆದಿಶಕ್ತಿ, ಪರಾಶಕ್ತಿ ಎಂಬ ಷಡ್ವಿಧ ಶಕ್ತಿಗಳು ಆವಿಷ್ಕಾರವಾಗುವುದು. ಷಡ್ವಿಧ ಭಕ್ತಿಗಳಾದ ಶ್ರದ್ಧಾ, ನಿಷ್ಠಾ, ಅನುಭಾವ, ಅವಧಾನ, ಆನಂದ, ಸಮರಸ ಎಂಬುವು ಹಂತಹಂತವಾಗಿ ವಿಕಾಸಗೊಳ್ಳುವುವು. ಈ ಭಕ್ತಿ ಎಂಬ ಎಡೆಯನ್ನು ಲಿಂಗದೇವನಿಗೆ ಉಣಿಸಲು ಭಾವ, ಜ್ಞಾನ, ಮನ, ಬುದ್ಧಿ, ಚಿತ್ತ, ಅಹಂಕಾರ ಎಂಬ ಆರು ಅಂತಃಕರಣಗಳು (ಹಸ್ತ)ಸಾಧನವಾಗುವುವು. ಈ ಎಡೆಯನ್ನು ಸ್ವೀಕರಿಸಲು ಷಡ್ವಿಧ ಲಿಂಗಗಳಾದ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಮಹಾಲಿಂಗಗಳು ಸಿದ್ಧವಾಗುವುವು. ಆಗ ತನ್ಮಾತ್ರೆಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬುವು ದೈವೀಕರಣಗೊಳ್ಳುವುವು. ಇವೆಲ್ಲವೂ ಸಾವಧಾನದಿಂದ ಅರ್ಪಿತವಾಗಿ ದೈವೀಕರಣಗೊಳ್ಳಲು ತ್ಯಾಗಾಂಗ, ಭೋಗಾಂಗ, ಯೋಗಾಂಗ ಎಂಬ ತ್ರಿವಿಧ ಅಂಗಸ್ಥಲಗಳು ಅಡಗಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳು ಎಂಬ ಲಿಂಗಾಂಗಸ್ಥಲಗಳು ಉಳಿಯುವುವು. ಆಗ ಶರೀರವೇ ಗುರುವಾಗುವುದು. ಪ್ರಾಣವೇ ಲಿಂಗವಾಗುವುದು, ಜ್ಞಾನವೇ ಜಂಗಮವಾಗುವುದು. ಗುರುವಿನ ಮೂಲಕ ಶುದ್ಧಪ್ರಸಾದ, ಲಿಂಗದ ಮೂಲಕ ಸಿದ್ಧಪ್ರಸಾದ, ಜಂಗಮದ ಮೂಲಕ ಪ್ರಸಿದ್ಧ ಪ್ರಸಾದ ಲಭ್ಯವಾಗುವುದು. ಹೀಗೆ ಪ್ರಸಾದವನ್ನು ಹಾಸಿಕೊಂಡು ಹೊದ್ದುಕೊಂಡು ಪರಿಪೂರ್ಣತೆ ಅಳವಟ್ಟ ಶರಣ ಜ್ಞಾನಿಯಲ್ಲ, ಅಜ್ಞಾನಿಯಲ್ಲ, ಶೂನ್ಯವಲ್ಲ-ನಿಶ್ಶೂನ್ಯವಲ್ಲ, ದ್ವೈತಿಯಲ್ಲ-







ಅದ್ವೈತಿ ಮುನ್ನವೇ ಅಲ್ಲ. ಈ ಸಾಧನೆಯನ್ನು ದೇವಾ ನಿಮ್ಮ ಶರಣರು ಬಲ್ಲರು.

**323. ಲಿಂಗಕ್ಕೆ ಶರಣೆಂದು ಪೂಜಿಸಿ, ಅರ್ಪಿಸಬಹುದಲ್ಲದೆ,**

**ಜಂಗಮವ ಪೂಜಿಸಿ ಸರ್ವಸುಖವನರ್ಪಿಸಿ**
**ಶರಣೆನ್ನಬಾರದು ಎಲೆ ತಂದೆ.**
**ಆಡಬಹುದು ಪಾಡಬಹುದಲ್ಲದೆ,**
**ನುಡಿದಂತೆ ನಡೆಯಲುಬಾರದು ಎಲೆ ತಂದೆ.**
**ಚೆನ್ನಮಲ್ಲಿಕಾರ್ಜುನದೇವರ ದೇವಾ,**
**ನಿಮ್ಮ ಶರಣರು ನುಡಿದಂತೆ ನಡೆಯಲು ಬಲ್ಲರು ಎಲೆ ತಂದೆ.**

ಪರಮಾತ್ಮನಿಗೆ ಶರಣೆಂದು ಪೂಜಿಸಿ, ಸಮರ್ಪಣ ಭಾವದಿಂದ ಸರ್ವಸುಖವನರ್ಪಿಸಿ ಹರ್ಷಿಸಬಹುದು. ಆದರೆ ಜಂಗಮಕ್ಕೆ ಹಾಗೆ ಮಾಡಲು ಬರದು. ಜಂಗಮದ ಪಾದಪೂಜೆ ಮಾಡಬಹುದು. ಹೊಗಳಿ ಹಾಡಬಹುದು. ಅದಕ್ಕಿಂತಲೂ ಮುಂದುವರಿಯಲು ಬರುವುದಿಲ್ಲ. ಇಷ್ಟಲಿಂಗಪೂಜೆಗೆ ಸೀಮೆ ಇಲ್ಲ; ಜಂಗಮಪೂಜೆಗೆ ಮಿತಿ ಇದೆ.

**324. ಚಿಚ್ಛಕ್ತಿಯ ಅವತರಣ – ಬಸವಣ್ಣನು**

**ಆದಿ ಅನಾದಿಗಳಿಂದತ್ತಲಯ್ಯಾ ಬಸವಣ್ಣನು.**
**ಮೂದೇವರ ಮೂಲಸ್ಥಾನವಯ್ಯಾ ಬಸವಣ್ಣನು.**
**ನಾದ ಬಿಂದು ಕಳಾತೀತ ಆದಿ ನಿರಂಜನನಯ್ಯಾ ಬಸವಣ್ಣನು.**
**ಆ ನಾದಸ್ವರೂಪೇ ಬಸವಣ್ಣನಾದ ಕಾರಣ**
**ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.**
**ಕಾಣಾ ಚೆನ್ನ ಮಲ್ಲಿಕಾರ್ಜುನದೇವರ ದೇವಯ್ಯಾ.**

ಬಸವಣ್ಣ ಎಂಬ ಪದವು ಇಲ್ಲಿ ಪರಮಾತ್ಮನಲ್ಲಿ ಅಂತರ್ಗತವಾದ ಚಿಚ್ಛಕ್ತಿಗೆ ಅನ್ವಯವಾಗುತ್ತದೆ. ದೇವರನ್ನು ನಾವು ಯಾವ ಹೆಸರಿನಿಂದಾದರೂ ಕರೆಯಬಹುದು. ಶಿವ, ರಾಮ, ಕೃಷ್ಣ ಇತ್ಯಾದಿ ಹೆಸರಿನಿಂದ ಕರೆಯಬಹುದು. ಆದರೆ ಶಿವ, ರಾಮ, ಕೃಷ್ಣರನ್ನೇ ಸೃಷ್ಟಿಕರ್ತ ದೇವರು ಎನ್ನಲುಬರದು. ಆದಿ-ಅನಾದಿ ಇಲ್ಲದಂದು ದೇವರು ಸ್ವಯಂಭುವಾಗಿ ಇದ್ದ. ಆಗ ಅವನಲ್ಲಿ ಚಿಚ್ಛಕ್ತಿ(ಬಸವಣ್ಣನು) ಸುಪ್ತವಾಗಿ ಅಡಗಿಕೊಂಡಿತ್ತು. ಇಂಥ ಚಿಚ್ಛಕ್ತಿಯು ಮೂದೇವರುಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರ ಮೂಲಸ್ಥಾನವಾಗಿತ್ತು. ಆ ಸ್ವಯಂಭುವು ನಾದಬಿಂದು ಕಳಾತೀತವಾಗಿದ್ದಿತು. ಅದು ನಿರಂಜನ ಸ್ವರೂಪದ್ದಾಗಿತ್ತು. ಇಂಥ ಚಿಚ್ಛಕ್ತಿಯೇ 12ನೆಯ ಶತಮಾನದಲ್ಲಿ ಗುರು ಬಸವಣ್ಣನವರೆಂಬ ಸಾಕಾರ ರೂಪವನ್ನು ತಳೆಯಿತು. ಇಂಥ ಚಿಚ್ಛಕ್ತಿಯ ಸಾಕಾರವಾದ ಗುರು ಬಸವಣ್ಣನ ಪಾದಕ್ಕೆ ನಾನು ನಮೋ ನಮೋ ಎನ್ನುತ್ತಿರುವೆನು.

ಲಿಂಗಾಯತ ದರ್ಶನಶಾಸ್ತ್ರದ ಪ್ರಕಾರ ದೇವರು ಮಾನವಾಕಾರವನ್ನು ತಾಳಿ, ತಾಯಿ ತಂದೆಯರ ಗರ್ಭದಲ್ಲಿ ಜನಿಸುವುದಿಲ್ಲ. ದೇವರಲ್ಲಿ ಅಂತರ್ಗತವಾಗಿರುವ ಜ್ಞಾನ-ಇಚ್ಛಾ-ಕ್ರಿಯಾಶಕ್ತಿಯ ಸಂಗಮವಾದ ಚಿಚ್ಛಕ್ತಿಯು ಕೆಲವು ವಿಶೇಷ ವ್ಯಕ್ತಿಗಳನ್ನು ಆಯ್ಕೆ

ಮಾಡಿಕೊಂಡು ಅವತೀರ್ಣಗೊಳ್ಳುವುದು. ಹಾಗೆ ಅನುಗ್ರಹಿಸಲ್ಪಟ್ಟ ವ್ಯಕ್ತಿ ಗುರು ಬಸವಣ್ಣನವರು.

**325. ಸರ್ವವ್ಯಾಪಿ ಗುರು ಬಸವಣ್ಣನವರು**

ಆದಿ ಅನಾದಿ ಎನ್ನದೆ ಬಸವಣ್ಣಾ ಗಣಮೇಳಾಪವಾಗಿ
ಅನಂತ ಯುಗಂಗಳಲ್ಲಿ ಸಕಲ ಲೋಕದೊಳು
ಚರಿಸುತ್ತಿಪ್ಪ ಸುಳುಹನರಿಯದೆ
ಸಕಲ ನಿಃಕಲರೆಲ್ಲ ಭ್ರಮೆಗೊಂಡು ಬೀಳುತ್ತೇಳುತ್ತಿರ್ದರು.
ಇವರೆಲರ್ಲ ಮುಂದೆ ಆ ಗಣಂಗಳ ನಾನರಿದು ಬದುಕಿದೆನು.
ಕಾಣಾ ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ.

ಇದು ಬಹಳ ಮಹತ್ವಪೂರ್ಣ ವಚನ. "ಆದಿ ಅನಾದಿ ಅಂದರೆ ಅಂದು, ಇಂದು ಎನ್ನದೆ ಗುರು ಬಸವಣ್ಣನವರು ಎಲ್ಲಿ ಅನುಭಾವಗೋಷ್ಠಿ, ಗಣಮೇಳಾಪ ನಡೆಯುವುದೋ ಅಲ್ಲಿ ನೆಲೆಸಿರುವರು. ಅನಂತ ಯುಗಗಳಲ್ಲಿ ಅಂದರೆ ಕಾಲಾತೀತವಾಗಿ, ಸಕಲ ಲೋಕದಲ್ಲಿ ಅಂದರೆ ದೇಶಾತೀತವಾಗಿ ಅವರ ಚೈತನ್ಯವು ಸಂಚರಿಸುತ್ತಿರುವುದು. ಇದು ಸಾಮಾನ್ಯರಿಗೆ ತಿಳಿಯುವುದಿಲ್ಲ. ನಾನು ಮಾತ್ರ ಆ ಚೈತನ್ಯದ ಸುಳಿವನ್ನು ಅರಿತು, ಆನಂದಿಸುತ್ತಿದ್ದೇನೆ." ಎನ್ನುತ್ತಾರೆ ಅಕ್ಕನವರು.

ಎಲ್ಲಿ ಬಸವಾನುಭಾವ ಚಿಂತನೆ ನಡೆಯುವುದೋ ಅಲ್ಲಿ ಬಸವ ಚೈತನ್ಯದ ಸಂಚಾರವಿರುವುದು. ಲಿಂಗೈಕ್ಯರಾಗಿರುವ ಗುರು ಬಸವಣ್ಣನವರು ದೇವರಲ್ಲಿ ತಮ್ಮ ವಿಶೇಷತೆಯನ್ನು ಕಾಯ್ದುಕೊಂಡು ಧ್ಯಾನಿಸುವ ಭಕ್ತರಿಗೆ ದರ್ಶನಕೊಡುವರು.

**326. ಶರಣರ ನಿಲುವು ಅಸಾಮಾನ್ಯ**

ಇದನಾರಯ್ಯಾ ಬಲ್ಲರು?
ಹಮ್ಮಳಿದ ಶರಣರ ಮೇಲಿಹ ಪರವ ಬಲ್ಲ ಶರಣರ.
ಪಂಚೇಂದ್ರಿಯದ ಇಂಗಿತ ಬಲ್ಲ ಶರಣ.
ಒಡಲ ಬಿಟ್ಟ ಶರಣನಲ್ಲದೆ,
ಉಳಿದ ಪ್ರಾಣಾಘಾತಕ ಪಾತಕರಿವರೆತ್ತಲು,
ಚೆನ್ನಮಲ್ಲಿಕಾರ್ಜುನದೇವರ ದೇವಾ
ನಿಮ್ಮ ಶರಣ ಬಸವಣ್ಣಂಗಲ್ಲದೆ.

ಶರಣರ ನಿಲುವನ್ನು ಸಾಮಾನ್ಯರು ಅರಿಯರು. ಅವರು ನಾನು-ನನ್ನದು ಎಂಬ ಹಮ್ಮನ್ನು ಕಳೆದುಕೊಂಡಿರುತ್ತಾರೆ. ಅವರ ಮೇಲೆ ಪರದ ಅಂದರೆ ದೇವನ ಅನುಗ್ರಹ ಸದಾ ಇರುತ್ತದೆ. ಅವರು ಪಂಚೇಂದ್ರಿಯಗಳ ಮೇಲೆ ಹಿಡಿತ ಸಾಧಿಸಿರುತ್ತಾರೆ. ಒಡಲ ಗುಣಗಳನ್ನು ಕಳೆದುಕೊಂಡಿರುತ್ತಾರೆ. ಕೇವಲ ಶರೀರದ ಮೇಲೆ ನಿಯಂತ್ರಣ ಸಾಧಿಸುವವರು ಪ್ರಾಣಾಘಾತಕ ಪಾತಕರು. ಗುರು ಬಸವಣ್ಣನವರ ಸಾಧನೆ ಕೇವಲ ದೇಹ-ಪ್ರಾಣಗಳ ಮೇಲಿಲ್ಲ; ಮನಸ್ಸಿನ ಮೇಲಿದೆ. ಪರಮಾತ್ಮನ ಅನುಗ್ರಹ ಪಡೆದುಕೊಳ್ಳುವುದರಲ್ಲಿದೆ.

(ಮುಂದುವರಿಯುವುದು..)





# ಇಂದ್ರಿಯ ನಿಯಂತ್ರಣ



"ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ,
ನಯನದಲ್ಲಿ ನಿಮ್ಮ ಮೂರುತಿ ತುಂಬಿ,
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಹೇ ಘನ ಲಿಂಗದೇವಾ ನಿಮ್ಮ ಚರಣ ಕಮಲದೊಳಗಾನು ತುಂಬಿ".

ಎಂದು ಧರ್ಮಪಿತ ಬಸವಣ್ಣನವರು ಪ್ರಸಾದ ಭೋಗಕ್ಕೆ ಸಂಬಂಧಿಸಿ ನಮಗೆ ಮನವರಿಕೆ ಮಾಡುತ್ತಿದ್ದಾರೆ. ಒಂದು ಮನೆಯಲ್ಲಿಯ ಕೊಳೆಯನ್ನು, ಕಸ-ಕಡ್ಡಿಯನ್ನು ತೆಗೆದು ಸ್ವಚ್ಛಗೊಳಸಿದ ಮೇಲೆ ಆ ಸ್ಥಳದಲ್ಲಿ ಒಳ್ಳೊಳ್ಳೆಯ ಸಾಮಾನು, ಪದಾರ್ಥಗಳನ್ನು ಇರಿಸಿದಾಗ ಆ ಮನೆಗೆ ಭೂಷಣ ಪ್ರಾಪ್ತಿಯಾಗುವುದು. ಅದರಂತೆ ಕರ್ಮೇಂದ್ರಿಯ, ಜ್ಞಾನೇಂದ್ರಿಯ ಮತ್ತು ಅಂತಃಕರಣಗಳಲ್ಲಿರುವ ವಿಷಯಗಳಿಂದ ಆವೃತವಾಗಿರುವ ಕೆಟ್ಟ ಕ್ರಿಯೆಗಳು, ದುರ್ವಿಚಾರ ಹಾಗೂ ದುರ್ವವೃತ್ತಿಗಳನ್ನು ಪದಾರ್ಥ ತ್ಯಾಗದಿಂದ ಸ್ವಚ್ಛ ಹಾಗೂ ಶುದ್ಧಿಗೊಳಿಸಿ ಆಯಾ ಸ್ಥಾನಗಳಲ್ಲಿ ಕ್ರಿಯೆ, ಜ್ಞಾನ ಹಾಗೂ ಅನುಭಾವಗಳನ್ನು ಅಳವಡಿಸಿಕೊಳ್ಳುವುದನ್ನು ವಿವೇಕಿಸುವಾ.

ವಾಕ್, ಪಾಣಿ, ಪಾದ, ಗುದ, ಗುಹ್ಯ :- (ಕರ್ಮೇಂದ್ರಿಯಗಳು)

**ವಾಕ್:-** ಮಾತುಗಳಲ್ಲಿ ಸ್ಪಷ್ಟತೆ, ಸತ್ಯತೆ, ಶುದ್ಧತೆ ಇದ್ದರೆ ಅವು ಮಂತ್ರಸ್ವರೂಪವಾಗುವುವು. ಆಗ



"ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಲಿಂಗದೇವನೆಂತೊಲಿವನಯ್ಯಾ?"

"ಮಾತು ಆಡಿದರೆ ಆಯಿತು, ಮುತ್ತು ಒಡೆದರಾಯ್ತು"

"ಮಾತು ಬಲ್ಲವ ತಾ ಸೋತು ಹೋಹುದೇ ಲೇಸು
ಮಾತಿಂಗೆ ಮಾತು ಮಥಿಸಲ್ಕೆ । ವಿಧಿ ಬಂದು
ಆತುಕೊಂಡಿಹುದು ಸರ್ವಜ್ಞ॥ ಇದು ಪ್ರಸಾದಭೋಗ.

**ಪಾಣಿ:-** ಕೈಗಳು ಮೊಟ್ಟ ಮೊದಲನೆಯದಾಗಿ ದೀನರು, ದಲಿತರ, ಬಡವರ, ತಂದೆ-ತಾಯಿ, ಗುರು-ಹಿರಿಯರ ಸೇವೆ, ಲಿಂಗ ಪೂಜೆ, ಜಪ, ಯೋಗಾಸನ ಮಾಡಲು, ಅರ್ಥಪೂರ್ಣ ಪತ್ರ ಬರೆಯಲು, ಕವಿತೆ ಬರೆಯಲು, ಒಳ್ಳೊಳ್ಳೆ ಸಾಹಿತ್ಯ ರಚಿಸಲು, ವಚನಗಳನ್ನು ಬರೆಯಲು, ದೀಕ್ಷೆ ಕೊಡಲು ಆಶೀರ್ವದಿಸಲು, ಹೀಗೆ ಪುಣ್ಯದ, ಒಳಿತಾಗುವ ಕಾರ್ಯಗಳನ್ನು ಕೈಗೊಳ್ಳುವುದೇ ಕೈಗಳಿಗೆ ಪ್ರಸಾದ ಭೋಗ.

**ಪಾದ:-** ಶರಣಜನ ಹೃದಯ ಕಮಲದೊಳು ಪರಿಶೋಭಿಸುತ್ತಿಹುದು ನಿನ್ನಪಾದ ಅಂತಾ ದೇವನನ್ನು ಕುರಿತು ಪಾದದ ಮಹಿಮೆಯನ್ನು ಕೊಂಡಾಡಿದ್ದಾರೆ. ಪದದಲ್ಲಿದೆ ಅದ್ಭುತ ಶಕ್ತಿ. ಎಲ್ಲರೂ ನಮಿಸುವುದು ಬಾಗುವುದು ಪಾದಕ್ಕೆ ಮಾತ್ರ. ಲಿಂಗದೇವನ ಶರಣರ ಪಾದವೇ ಪರುಷ, ತಪಸ್ಸು ಮಾಡಿದ ಶಕ್ತಿ ಎಲ್ಲಾ ಪಾದದಲ್ಲಿ ಶೇಖರಣೆ ಆಗಿರುತ್ತದೆ. ಒಳ್ಳೊಳ್ಳೆ

ಪವಿತ್ರವಾದ ಸ್ಥಳಕ್ಕೆ ಹೋಗುವುದು ಯೋಗಾಸನಕ್ಕೆ ಯಾವಾಗಲು ಪಾದಗಳನ್ನು ಬೆಚ್ಚಗೆ ಇಟ್ಟುಕೊಳ್ಳಲಿಕ್ಕೆ, ಧರ್ಮ ಪ್ರಚಾರ ಮಾಡಲಿಕ್ಕೆ, ಕಲಬುರಗಿ ಮತ್ತು ಬೀದರ ಜಿಲ್ಲೆಗಳಲ್ಲಿ 20 ವರ್ಷಗಳ ವರೆಗೆ ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಪಾದಯಾತ್ರೆಯ ಮುಖಾಂತರ, ಗುರು ಬಸವಣ್ಣನವರು ದಯಪಾಲಿಸಿದ ಲಿಂಗಾಯತ ಧರ್ಮ ವಚನ ಶಾಸ್ತ್ರ ಧರ್ಮ ಶರಣಧರ್ಮ ಬಸವಧರ್ಮವನ್ನು ಸತತವಾಗಿ ಧರ್ಮ ಪ್ರಚಾರ ಮಾಡಿದ್ದರಿಂದ ನಮಗೆಲ್ಲ ಅದರ ಮರ್ಮ ವಿದಿತವಾಗಿ, ಯಾವುದೇ ಪ್ರಶ್ನೆಯನ್ನು ಯಾರೇ ಕೇಳಿದರೂ ಸಮರ್ಥವಾಗಿ ಸಂಪೂರ್ಣವಾಗಿ ಉತ್ತರ ಹೇಳುವಂತಾಗಿದೆ. ಈ ರೀತಿಯಾಗಿ ಪಾದಗಳನ್ನು ಸದ್ಬಳಕೆ ಮಾಡಿಕೊಳ್ಳುವುದೇ ಪಾದದ ಪ್ರಸಾದ ಭೋಗ.

**ಗುದ:–** ಆಧಾರ ಚಕ್ರದ ಸ್ಥಾನವಾದ ಇದು ಬಹಳ ಮಹತ್ವದ ಪಾತ್ರವಹಿಸುವುದು. ಕುಂಡಲಿನಿ ಸರ್ಪವು ಅಧೋಮುಖವಾಗಿ ಮಡಗಿಕೊಂಡಿರುವುದು. ಅದನ್ನು ತನ್ನೆಲ್ಲ ಪ್ರಾಣಶಕ್ತಿಯನ್ನು ಲಿಂಗಪ್ರಾಣವನ್ನಾಗಿ ಪರಿವರ್ತಿಸಿ ಊರ್ಧ್ವದತ್ತ ಮುಖ ಮಾಡಿ ನಿರಂತರ ಸಾಧನೆಯ ಪ್ರಖರತೆಯಿಂದ ಒಂದೊಂದಾಗಿ ಚಕ್ರ ಭೇದವನ್ನು ಮಾಡುತ್ತಾ ಸಹಸ್ರಾರ ಚಕ್ರದ ವರೆಗೆ ಸುಷುಮ್ನ ನಾಡಿಯಗುಂಟ ಹೋಗಿ ತಲುಪಿದಾಗ ಆನಂದವೋ ಮಹದಾನಂದಮಯವಾಗಿ ಮಾರ್ಪಡುವುದು. ಇದು ಗುದ ಇಂದ್ರಿಯದ ಪ್ರಸಾದ ಭೋಗ.

**ಗುಹ್ಯ:–** ಇದರ ಸದ್ವಿನಿಯೋಗದಿಂದ ಸ್ತ್ರೀ ಪುರುಷರು ಹಾಗೂ ವಿರಕ್ತರು ನಿಗ್ರಹಿಸಿದರೆ, ಸದ್ಬಳಕೆಯಿಂದ ಉತ್ತಮ ಸಂತಾನ ಹಾಗೂ ಯೌಗಿಕ ಮಾರ್ಗವನ್ನು ಅನುಸರಿಸಿ ಸಾರ್ಥಕ ಜೀವನ ನಡೆಸಬಹುದು.



ಒಂದು ಕಡೆ

**"ಮೂತ್ರವು ಬಿಂದುವು ಒಂದು ನಾಳದಲ್ಲಿ ಬರ್ಕು**
**ಒಂದ ಬಿಟ್ಟು ಒಂದು ತಡೆದರೆ। ಪರಬ್ರಹ್ಮನು**
**ಒಂದು ಅಕ್ಕು ಸರ್ವಜ್ಞ**

ಎಂದು ಗುಹ್ಯದ ಮಹತಿಯನ್ನು ವಿವರಿಸಿದ್ದಾರೆ. "ಕಾಮವನ್ನು ಹತ್ತಿಕ್ಕಬಾರದು, ಅದನ್ನು ಸದ್ಬಳಕೆ ಮತ್ತು ಉದಾತ್ತೀಕರಣ ಮಾಡಲು ಸೂಚಿಸುತ್ತಾರೆ ಜ್ಞಾನಿಗಳು. ಈ ಕ್ರಮವು ಗುಹ್ಯ ಇಂದ್ರಿಯದ ಪ್ರಸಾದ ಭೋಗ.

ಇನ್ನು ಕಣ್ಣು, ಕಿವಿ, ನಾಲಿಗೆ, ಚರ್ಮ, ಘ್ರಾಣೇಂದ್ರಿಯಗಳ ಬಗ್ಗೆ ವಿವೇಚಿಸೋಣ.

**ಕಣ್ಣು:–** **"ಕಣ್ಣಿನಿಂದಲೆ ಇಹವು। ಕಣ್ಣಿನಿಂದ ಪರವು।**
**ಕಣ್ಣಿನಿಂದಲೆ ಸಕಲ ಸಂಪದವು।**
**ಕಣ್ಣೊಲ್ಲದಣ್ಣಗಳು ಯಾರು ಸರ್ವಜ್ಞ?**

ಎಂದು ಕಣ್ಣುಗಳ, ಮಹತಿಯನ್ನು ಸರ್ವಜ್ಞನಮಗರುಹುತ್ತಲಿದ್ದಾರೆ.

ದೇವನು ನಿರ್ಮಿಸಿದ ಸುಂದರ ವಿನ್ಯಾಸಗಳಿಂದ ಕೂಡಿದ ಜಗತ್ತನ್ನು ನೋಡಲು, ನೋಡಿ ಆನಂದ ಪಡಲು, ಕ್ಯಾಮರಾದಂತಹ ಕಣ್ಣುಗಳು ಎಲ್ಲವನ್ನೂ ಘೋಟೋವನ್ನು ತೆಗೆದು ನೆಗೆಟಿವ್ ಘೋಟೋಗಳನ್ನು ಸಂಗ್ರಹಿಸಿ ಚಿತ್ತದಲ್ಲಿಟ್ಟಿರುತ್ತದೆ. ಯಾವಾಗ ಬೇಕೋ ಆವಾಗ ಉಪಯೋಗಿಸಿಕೊಳ್ಳುತ್ತದೆ. ಇನ್ನು ಆಧ್ಯಾತ್ಮಿಕವಾಗಿ ಗುರು–ಲಿಂಗ–ಜಂಗಮಭಕ್ತ–ಶರಣರನ್ನು ಭಕ್ತಿಯಿಂದ ನೋಡಿ ಹಿಗ್ಗಿ ಹಾರೈಸಿದ್ದನ್ನೂ ಸಹ ಇಟ್ಟುಕೊಂಡಿರುತ್ತದೆ. ತ್ರಾಟಕಯೋಗ ಮಾಡಲು ಏಕಾಗ್ರತೆ ಸಾಧಿಸಲು ಅತೀ ಶ್ರೇಷ್ಠವಾದ ಸಾಧನ ಕಣ್ಣು.

"ಆಲಿ ನಿಂದೊಡೆ, ಸುಳಿದು ಸೂಸುವ ಗಾಳಿ ನಿಲುವುದು, ಗಾಳಿ ನಿಂದಡೆ ಮನ ಮೇಲೆ





ನಿಲುವುದು. ಮನ ನಿಂದಡೆ ಪರಮಾನಂದವಹುದು. ಇದೇ ರೀತಿ ನಿರಂತರ ಮುಂದುವರೆದದ್ದೇ ಆದರೆ ನಿಜ ಮುಕ್ತಿಯನ್ನು ಲಿಂಗಾಂಗ ಸಾಮರಸ್ಯದ ಮೂಲಕ ಪಡೆಯಬಹುದು. ಇಷ್ಟು ಸಾಧಿಸಿದರೆ ಕಣ್ಣಿನ ಪ್ರಸಾದ ಭೋಗ ಸಾರ್ಥಕವಾಗುವುದು.

**ಕಿವಿ:–** ಕೇಳಿ ಕೇಳಿ ಬಂದ ಅಜ್ಞಾನವನ್ನು ಸದ್ಗುರುಗಳಿಂದ, ಶರಣರ ವಚನಗಳನ್ನು ಕೇಳಿ ಕೇಳಿ ಸುಜ್ಞಾನವನ್ನುಂಟುಮಾಡಿಕೊಳ್ಳಲಿಕ್ಕೆ.

"ಒಬ್ಬ ವ್ಯಾಪಾರಿ ಮೂರು ಗೊಂಬೆಗಳನ್ನು ಮಾರಾಟಕಿಕ್ಕಿದ್ದ. ಒಂದೇ ರೀತಿಯ, ಒಂದೇ ರೂಪಿನ ಬೇರೆಬೇರೆ ಬೆಲೆಯ ಗೊಂಬೆಗಳಿದ್ದವು. ಒಂದು ಕಿವಿಯಿಂದ ಕಡ್ಡಿ ಹಾಕಿದರೆ ಮತ್ತೊಂದು ಕಿವಿಯಿಂದ ಪಾರಾಗುತ್ತಿತ್ತು, ಅದರ ಬೆಲೆ 10 ಸಾವಿರ ರೂಪಾಯಿ. ಇನ್ನೊಂದು ಗೊಂಬೆಯ ಕಿವಿಯಲ್ಲಿ ಕಡ್ಡಿಯನ್ನು ತೂರಿಸಿದಾಗ ಬಾಯಿಯ ಮುಖಾಂತರ ಹೊರ ಬರುತ್ತಿತ್ತು ಇದರ ಬೆಲೆ 25 ಸಾವಿರ ರೂಪಾಯಿ. ಮೂರನೆಯ ಬೊಂಬೆಯ ಕಿವಿಯಲ್ಲಿ ಕಡ್ಡಿಯನ್ನು ಸೇರಿಸಿದಾಗ ಹೊಟ್ಟೆಯ ಒಳಗೆ ಹೋಗುತ್ತಿತ್ತು, ಬೆಲೆ 50 ಸಾವಿರ ರೂಪಾಯಿ. ಇದೇ ರೀತಿಯಲ್ಲಿ ಈ ಜಗತ್ತಿನಲ್ಲಿ ಜನರಿದ್ದಾರೆ. ಕೇಳಿದ್ದನ್ನು ಮತ್ತೊಂದು ಕಿವಿಯಿಂದ ಹೊರ ಹಾಕುವವರು. ಕೇಳಿದ್ದನ್ನು ಬಾಯಿಯಿಂದ ಹೊರ ಹಾಕುವವರು. ಕೇಳಿದ್ದನ್ನು ಹೊಟ್ಟೆಯಲ್ಲಿ ಇಟ್ಟುಕೊಳ್ಳುವವರು. ಇದು ಕೆಟ್ಟದಕ್ಕೂ ಉಪಯೋಗವಾಗುತ್ತೆ, ಒಳ್ಳೆಯದಕ್ಕೂ ಉಪಯೋಗವಾಗುತ್ತೆ. ಕೆಟ್ಟ ಮಾತುಗಳನ್ನು ಕೇಳಿ ಮತ್ತೊಂದು ಕಿವಿಯಿಂದ ಬಿಟ್ಟು ಬಿಟ್ಟರೆ ಒಳ್ಳೆಯದು. ಕೇಳಿ ಬಾಯಿಯಿಂದ ಆಡಿ ಮನಸ್ಸು ಕೆಡಿಸಿಕೊಂಡು ಮತ್ತೊಬ್ಬರ ಮನಸ್ಸನ್ನು, ಅವರ ಬಾಳನ್ನು ಹಾಳು ಮಾಡುತ್ತಾರೆ. ಇನ್ನು ಕೆಟ್ಟ ಮಾತುಗಳನ್ನು ಕೇಳಿ ಹೊಟ್ಟೆಯಲ್ಲಿ ಇಟ್ಟುಕೊಂಡು ಉದಾಸೀನ ಮಾಡಿ ಪರಾಮರ್ಶಿಸಿ ಹೇಳಿದವರ ವ್ಯಕ್ತಿತ್ವವನ್ನು ಅರಿತುಕೊಂಡು ಭಾವೀ ಜೀವನದಲ್ಲಿ ಪಾಠವಾಗುವುದು.

ಇನ್ನು ಒಳ್ಳೆಯ ಜೀವನಕ್ಕೆ ಲೌಕಿಕ ಮತ್ತು ಪಾರಮಾರ್ಥಿಕವಾಗಿ ಕೇಳದ್ದನ್ನು ಯಾವುದು ಬೇಕೊ ಅದನ್ನು ತಾನು ತಿಳಿದುಕೊಂಡು ಬೇರೆಯವರಿಗೂ ಬಾಯಿಯಿಂದ ಹೇಳಿ, ತನ್ನ ಜೀವನಕ್ಕೆ ಉಪಯೋಗಿಸಿ ಹೊಟ್ಟೆಯಲ್ಲಿಟ್ಟುಕೊಂಡು ಜೀವಿಸುವುದು. ಬೇಡಾದ ಮಾತುಗ್ಗಳಿದ್ದರೆ ಒಂದು ಕಿವಿಯಿಂದ ಬಿಟ್ಟುಕೊಟ್ಟು ಅದನ್ನು ಆಡಿಕೊಳ್ಳದೇ ಹೊಟ್ಟೆಯಲ್ಲಿ ಹಾಕಿಕೊಳ್ಳದೇ ಇರುವುದು. ಇದನ್ನು ಅರಿತುಕೊಂಡು ಆಚರಿಸಿ ವ್ಯವಹರಿಸುವುದು ಕಿವಿಯ ಪ್ರಸಾದ ಭೋಗ.

**ಮೂಗು:–** ಮೂಗಿನ ಮುಖಾಂತರ ಒಳಸೇರುವ ಗಾಳಿ ಅಥವಾ ವಾಯು ಪರಿಶುದ್ಧ ಪ್ರಾಣವಾಯುವಾಗಿರಬೇಕು. ದುರ್ಗಂಧಯುಕ್ತ ವಾಯು ಸ್ವಲ್ಪ ಪ್ರವೇಶಿಸಿತೆಂದರೆ ಆರೋಗ್ಯ ಹಾಳಾಗುವುದರೊಂದಿಗೆ ಮನಸ್ಸು ಮಲಿನವಾಗುವುದು. ಇನ್ನು ಒಳಸೇರಿದ ಪ್ರಾಣವಾಯು ಮಲಿನವಾಗಿ ಹೊರ ಹಾಕಲೂ ಉಪಯೋಗವಾಗುವುದು ಮೂಗು. ಯೋಗ ಸಾಧನಗೈಯುವಾಗ ಪ್ರಾಣವಾಯುವನ್ನು ಸಹ ತೆಗೆದುಕೊಳ್ಳುವುದನ್ನು ಅನುಭವಿಗಳಿಂದ ಸಲಹೆ ಸೂಚನೆ ಕ್ರಮವನ್ನು ಅರಿತುಕೊಂಡು ಸಾಧನೆಗೈದಾಗ ಯೋಗಿಯಾಗುವನು. ಸುಧೀರ್ಘವಾದ ಉಸಿರಾಟದಿಂದ ಆಯುಷ್ಯ ಹೆಚ್ಚಾಗುವುದು, ಯೋಗಾಸನ ಪ್ರಾಣಾಯಾಮದಿಂದಲೂ ಆರೋಗ್ಯವಂತನಾಗಿ ಸದೃಢಕಾಯವಾಗುವುದರೊಂದಿಗೆ ಸಮಚಿತ್ತವನ್ನು ಇರಿಸಿಕೊಳ್ಳಬಹುದು. "ವಾಸನಾಕ್ಷಯವೇಮೋಕ್ಷ" ಎಂದು ಸಾಂಕೇತಿಕವಾಗಿ ಹೇಳಿರುವರು. ಈ ರೀತಿಯಾಗಿ ಮೂಗಿನ ಮಹತಿಯನ್ನರಿತು ವ್ಯವಹರಿಸುವುದೇ ಮೂಗಿನ ಪ್ರಸಾದ ಭೋಗ.

**ನಾಲಿಗೆ:–** ನಾಲಿಗೆ ನಮ್ಮ ಆರೋಗ್ಯ ಮತ್ತು ಸಂಸ್ಕೃತಿಯನ್ನು ಸೂಚಿಸುತ್ತದೆ. 32 ಚೂಪಾದ ಹಲ್ಲುಗಳ ಮಧ್ಯದಲ್ಲಿ ಯಾವುದೇ ತರಹದ ಹಾನಿಗೆ ಒಳಗಾಗದೆ ಮೃದುತ್ವವನ್ನು ಮತ್ತು

ಶೀತಗುಣವನ್ನು ಕಾಪಾಡಿಕೊಂಡಿರುತ್ತದೆ. ಇದನ್ನು ಪ್ರತಿಯೊಬ್ಬ ಮಾನವನು ಸೂಕ್ಷ್ಮವಾಗಿ ಜ್ಞಾನಾತ್ಮಕವಾಗಿ ಎಚ್ಚರಕೆಯಿಂದ ಗಮನಿಸಿ ನಾಲಿಗೆಯಂತೆ ಈ ಜಗತ್ತಿನಲ್ಲಿ ಲೌಕಿಕ ಹಾಗೂ ಆಧ್ಯಾತ್ಮಿಕವಾಗಿ ಜೀವನವನ್ನು ನಡೆಸಬಹುದು.

ಅಭಕ್ಷ ಭಕ್ಷಣೆ, ಅಪೇಯ ಪೇಯಗಳನ್ನು ತಾಮಸಯುಕ್ತವಾಗಿ ಸ್ವೀಕರಿಸದೆ ಅತಿಯಾದ ಹುಳಿ, ಉಪ್ಪು, ಖಾರ, ಒಗರು, ಸಿಹಿ, ಕಹಿಯಾದವುಗಳನ್ನು ರಾಜಸಯುಕ್ತವಾಗಿ ಭುಂಜಿಸದೆ, ಸಾತ್ವಿಕವಾದ ಹೆಚ್ಚಲ್ಲದೆ ಕಡಿಮೆಯಲ್ಲದೆ ಸತ್ವಯುಕ್ತವಾದ ಪ್ರಸಾದ ಸ್ವೀಕರಿಸಬೇಕು. ಲಾಲಾರಸದೊಡನೆ ಪ್ರತಿಯೊಂದನ್ನು ಅಗಿದು ಅಗಿದು ದ್ರವರೂಪವಾಗಿ ಮಾರ್ಪಡಿಸಿ ಒಳಗಡೆ ಕಳಿಸಬೇಕು. ಇದು ಬಹಳ ಮಹತ್ವದ ಮಾತು. ಇದರಿಂದ ಆರೋಗ್ಯವೂ ಆಯುಷ್ಯವೂ ವೃದ್ಧಿಯಾಗುವುದು. ನಾಲಿಗೆಗೆ ಮತ್ತು ಗುಹ್ಯಕ್ಕೂ ನಿಕಟ ಸಂಬಂಧವಿದೆ. ವೀರ್ಯವನ್ನು ಹಿಡಿತದಲ್ಲಿಟ್ಟುಕೊಂಡು ಯೋಗಿಯಾಗಬಹುದು. "ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು" ಎಂಬ ಉಕ್ತಿಯು ಈ ಶರೀರವೆಂಬನಾಡು, ಹೊರಗಡೆಯ ನಾಡು ಪೂರಕವಾಗಿರುವುದು. ನಾಲಿಗೆಯ ಬಗ್ಗೆ ವಿವರಿಸುತ್ತಾ ಹೋದರೆ ಒಂದು ಗ್ರಂಥವಾಗುವುದು. ಸಾಕು ಇಷ್ಟು. ಇದು ನಾಲಿಗೆ ಪ್ರಸಾದ ಭೋಗ.

**ಚರ್ಮ:-** ಶರೀರವನ್ನು ನಖ ಶಿಖಾಂತರವರೆಗೆ ತೆಳುವಾದ ಪದರಿನಿಂದ ರಕ್ಷಣೆಯನ್ನು ಒದಗಿಸಿದೆ ಈ ಚರ್ಮ. ಮಾನವನ್ನು ಛಳಿಗಾಲ, ಮಳೆಗಾಲ, ಬಿಸಿಲುಗಾಲದಿಂದ ರಕ್ಷಣೆ ಹೊಂದಲು ತುಂಬಾ ಸಹಾಯಕಾರಿಯಾಗಿದೆ ಈ ಚರ್ಮ. ಬೇಸಿಗೆ ಕಾಲದಲ್ಲಿ ಒಳಗಿನ ಕೊಳೆಯನ್ನು ಬೆವರಿನ ಮುಖಾಂತರ ಕೂದಲಿನ ರಂಧ್ರಗಳ ಮುಖಾಂತರ ಹೊರ ಹಾಕಿ ಶರೀರವನ್ನು ಸಮತೋಲನದಲ್ಲಿ ಇಡುವುದು ಈ ಚರ್ಮ. ಉಷ್ಣ ಶೀತ ಗುಣದಿಂದ ಕೂಡಿದ ಗಾಳಿಯನ್ನು ಅನುಭವಿಸುವುದು ಈ ಚರ್ಮ. ಲೌಕಿಕ ಜೀವನದಲ್ಲಿ ಸತಿ ಪತಿಗಳ ಸಂಯೋಗವನ್ನು ಅನುಭವಿಸಿ ಸಂತಾನೋತ್ಪತ್ತಿಗೆ ಕಾರಣವಾಗಿದೆ. ಇನ್ನು ಲೌಕಿಕವಾಗಿ ಶರಣ ಸತಿ, ಲಿಂಗ ಪತಿಯ ಲಿಂಗಾಂಗ ಸಾಮರಸ್ಯವನ್ನು ಅನುಭವಿಸಿ ಮುಕ್ತಿ ಸಾಮ್ರಾಜ್ಯಕ್ಕೆ ಒಡೆಯನನ್ನಾಗಿಸುವುದು ಈ ಚರ್ಮ. ಈ ರೀತಿ ಆಚಾರ ವಿಚಾರದಿಂದ ಇದರ ಅಂದರೆ ಚರ್ಮದ ಪ್ರಸಾದ ಭೋಗ.

ಮೂಗು-ಆಚಾರಲಿಂಗ, ನಾಲಿಗೆ-ಗುರುಲಿಂಗ, ಕಣ್ಣು -ಶಿವಲಿಂಗ, ಚರ್ಮ ಜಂಗಮಲಿಂಗ, ಕಿವಿ-ಪ್ರಸಾದ ಲಿಂಗ, ಹೀಗೆ ಜ್ಞಾನೇಂದ್ರಿಯಯಗಳು ಲಿಂಗೇಂದ್ರಿಯಗಳಾಗುವುದೇ ಪ್ರಸಾದ ಭೋಗ.

ಇನ್ನು ಮನ, ಬುದ್ಧಿ, ಚಿತ್ತ, ಅಹಂಕಾರವೆಂಬ ಅಂತಃಕರಣಗಳ ಪ್ರಸಾದ ಭೋಗದ ಬಗ್ಗೆ ತಿಳಿದುಕೊಳ್ಳೋಣ.

**ಮನ:-** **"ಮನವೆಂಬುದು ಬೇರಲ್ಲ ಮಹಾದೇವನ ಮಹಾ**
**ಅರುಹು ನೋಡಾ। ಸಂಕಲ್ಪ ವಿಕಲ್ಪಂಗಳ ಧರಿಸಿದಲ್ಲಿ**
**ಮನವೆನಿಸಿತ್ತು। ಅದು ಅಳಿದಲ್ಲಿ ಮಹಾಜ್ಞಾನವೆನಿಸಿತ್ತು**
**ಅಳಿದ ಭಾವ ತಲೆದೋರಿದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನೆನಿಸಿತ್ತು".**

ಈ ರೀತಿ ಲಿಂಗಾಂಗಯೋಗಿ ಶ್ರೀ ಸಿದ್ಧರಾಮೇಶ್ವರರು ಮನದ ನಿಲುವನ್ನು ನಿರೂಪಿಸಿದ್ದಾರೆ. ಇದೊಂದು ಅದ್ಭುತ ಅಂತರಿಂದ್ರಿಯ. ಈ ಮನಸ್ಸು ದೇವ ದಾನವ ಮಾನವರೆಲ್ಲರನ್ನು ಆಟ ಆಡಿಸುತ್ತಿರುತ್ತದೆ. ಈ ಮನಸ್ಸು ಭವ ಬಂಧನಕ್ಕೂ ಮುಕ್ತಿಗೂ ಕಾರಣೀಭೂತವಾಗಿದೆ. "ಮನ ಏವ ಮನುಷ್ಯಾನಾಂ ಬಂಧಮೋಕ್ಷ ಕಾರಣಂ".

* * * * *





# ಶೂಲದ ಮೇಲಿನ ಭೋಗ



-ಮಾತೆ ಕಸ್ತೂರಿದೇವಿ

ಶೂಲದ ಮೇಲಣ ವಿಭೋಗವೇನಾದಡೇನೊ ?
ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ !
ತನ್ನಾತ್ಮ ತನಗೆ ಹಗೆಯಾದ ಬಳಿಕ
ಬಿನ್ನಾಣವುಂಟೆ, ಮಹಾದಾನಿ ಲಿಂಗದೇವಾ

– ಬ.ವ.ದೀ 11

ಅದೊಂದು ಮದ್ಯಮ ವರ್ಗಕ್ಕೆ ಸೇರಿದ ಗಂಡ, ಹೆಂಡತಿ ಮತ್ತು ಎರಡು ಪುಟ್ಟ ಹೆಣ್ಣು ಮಕ್ಕಳಿದ್ದ ಚಿಕ್ಕ ಸಂಸಾರ. ಗಂಡನಾದವನು ದುಡಿದು ಹೆಂಡತಿ ಮಕ್ಕಳನ್ನು ಸಾಕುತ್ತಿದ್ದ. ಆಲಸಿ ಮತ್ತು ಅವಿವೇಕಿಯಾದ ಹೆಂಡತಿ ಯಾವಾಗಲೂ ಟಿ.ವಿ ಮುಂದೆ ಕುಳಿತು ಅಗ್ಗದ ಧಾರಾವಾಹಿ-ಸಿನಿಮಾ ನೋಡುವುದು, ಅಂಗಡಿ ಮತ್ತು ಹೋಟಲ್ಲುಗಳಿಂದ ತಂದ ಬಗಬಗೆ ತಿಂಡಿಗಳಿಂದ ತನ್ನ ಮತ್ತು ಮಕ್ಕಳ ಹೊಟ್ಟೆ ತುಂಬಿಸುವುದು; ಹೊರಗೆ ತಿರುಗುವುದು, ಪೇಟೆಯಲ್ಲಿ ಕಣ್ಣಿಗೆ ಕಂಡ ವಸ್ತುಗಳನ್ನು ಅದು ಎಷ್ಟು ಬೆಲೆಯಾದರೂ ಆಗಲಿ, ಅಗತ್ಯ ಇರಲಿ, ಇಲ್ಲದಿರಲಿ ಹಣ ಕೊಟ್ಟು ತರುವುದು-ಹೀಗೆ ಜೀವನ ಸಾಗಿಸುತ್ತಿದ್ದಳು. ಗಂಡನಾದರೂ ಅಷ್ಟೇ ಆಕೆಯನ್ನು ಅವಳ ಇಷ್ಟದಂತೆ ಇರಲು ಅವಕಾಶ ಮಾಡಿಕೊಟ್ಟಿದ್ದ ಮಾತ್ರವಲ್ಲ ಹೆಂಡತಿ ಹೇಳಿದ್ದಕ್ಕೆಲ್ಲ 'ಆಗಲಿ' ಎನ್ನುತ್ತಿದ್ದ. ಯಾವುದಕ್ಕೂ ಎದುರಾಡುತ್ತಿರಲಿಲ್ಲ. ಮಕ್ಕಳು ಸಹ ತಾಯಿತಂದೆಯರನ್ನೆ ಅನುಕರಣೆ ಮಾಡುತ್ತಿದ್ದರು. ಹೀಗಾಗಿ ಅವರೆಲ್ಲರೂ ಅನಗತ್ಯವಾದ ದುಂದುವೆಚ್ಚದ ಬದುಕಿಗೆ ಹೊಂದಿಕೊಂಡಿದ್ದರು. ಅವರು ತಮ್ಮ ಮತ್ತು ಮಕ್ಕಳ ಭವಿಷ್ಯದ ಬಗ್ಗೆ ಯಾವತ್ತೂ ಚಿಂತಿಸಿದವರಲ್ಲ. ದುಡಿದು ತಂದ ಹಣ ಎಲ್ಲವೂ ಅವರ ಆಡಂಬರಕ್ಕೆ ಖರ್ಚಾಗುತ್ತಿದ್ದು ಸಾಲದೆ ಇದ್ದಾಗ ಸಾಲವನ್ನು ಮಾಡುತ್ತಿದ್ದ. ಇದರಿಂದ ಸಾಲವೂ ಬೆಳೆಯುತ್ತಿತ್ತು. ಅವರ ಈ ಜೀವನಶೈಲಿಗೆ ಸಾಕಷ್ಟು ಆಸ್ತಿಪಾಸ್ತಿ ಇದೆ ಎಂದಲ್ಲ. ಈ ಭೂಮಿಯ ಮೇಲೆ ಇರುವಷ್ಟು ದಿನ ಸಾಲ ಮಾಡಿಯಾದರೂ ತುಪ್ಪ ತಿಂದು ಸುಖಪಡಬೇಕು, ಮಜ ಮಾಡಬೇಕು ಎಂಬ ದೌರ್ಬಲ್ಯವುಳ್ಳವರು. ಹೀಗಾಗಿ ಅವರಿದ್ದ ಊರಿನಲ್ಲಿ ಜನರನ್ನು ನಂಬಿಸಿ ಸಾಲ ಮಾಡುತ್ತಾ ತಮಗೆ ಸಾಧ್ಯವಾದ ಎಲ್ಲಾ ರೀತಿಯಿಂದಲೂ ದುಂದುವೆಚ್ಚ ಮಾಡುತ್ತಾ ಆಡಂಬರದ ಜೀವನವನ್ನು ಪ್ರದರ್ಶಿಸುತ್ತಾ ಬದುಕುವುದೇ ಅವರ ಜೀವನದ ಗುರಿಯಾಗಿತ್ತು. ಕೊನೆಗೆ ಸಾಲಗಾರರು ಸಾಲ ಕೇಳಲು ಬಂದಾಗ ಮತ್ತು ಸಾಲ ಹಿಂದಿರುಗಿಸಲು ಪದೇ ಪದೇ ಒತ್ತಡ ಹಾಕಿದಾಗ, ಸಾಲ ತೀರಿಸುವ ಕನಿಷ್ಟಮಟ್ಟದ ಪ್ರಾಮಾಣಿಕ ಪ್ರಯತ್ನವನ್ನು ಮಾಡದೆ ಯಾರಿಗೂ ಹೇಳದೆ ಕೇಳದೆ ರಾತ್ರೋರಾತ್ರಿ ಊರು ಖಾಲಿ ಮಾಡಿಕೊಂಡು ಪಲಾಯನ ಮಾಡಿ ತಲೆ ಮರೆಸಿಕೊಳ್ಳುತ್ತಿದ್ದರು. ಹೋದ ಪ್ರತಿ ಊರುಗಳಲ್ಲೂ ಹೀಗೆ ದುಂದುಕೋರರಾಗಿ ಬದುಕುತ್ತಾ, ಸಾಲಗಾರರ ಕೈಗೆ ಸಿಗದಂತೆ ತಲೆಮರೆಸಿಕೊಂಡು ಕಳ್ಳಜೀವನ ಸಾಗಿಸುತ್ತಾ ಬಂದರೂ ಅವರನ್ನು ಮಾತ್ರ ಯಾವುದೇ ಅಪರಾಧಿ ಪ್ರಜ್ಞೆಯಾಗಲಿ, ಅಪಮಾನವಾಗಲಿ ಅಥವ ಪಶ್ಚಾತ್ತಾಪವಾಗಲಿ



ಕಾಡುತ್ತಿರಲಿಲ್ಲ. ಅಲ್ಲದೆ ಪದೇ ಪದೇ ಮಾಡುತ್ತಿರುವ ಇಂಥ ತಪ್ಪುಗಳಿಂದ ಪಾಠ ಕಲಿಯುತ್ತಿರಲಿಲ್ಲ ಎಂಬುದು ಗಮನಾರ್ಹ.

ಇದೆಲ್ಲಾ ಭೋಗ ಅಥವ ವಿಲಾಸ ಜೀವನಕ್ಕೆ ಪೀಠಿಕೆಯಾಯಿತು. ಗುರು ಬಸವಣ್ಣನವರ ಸಂಸಾರ ಹೇಯಸ್ಥಲದಲ್ಲಿ ಬರುವ ಈ ವಚನದಲ್ಲಿ ಪ್ರಸ್ತಾಪಿಸಿರುವ ಶೂಲದ ಮೇಲಣ ವಿಭೋಗವೇನಾದಡೇನೊ ? ಎಂಬ ಮಾತಿನ ಪರಿಣಾಮವನ್ನು ಈಗ ನೋಡೋಣ! ಒಬ್ಬ ಮನುಷ್ಯ ಸಮಾಜದಲ್ಲಿ ಅದು ಸಂಸಾರಸ್ಥನಾದವನಿಗೆ ತಲೆಮರೆಸಿಕೊಂಡು ಬದುಕುವುದು ಅಷ್ಟು ಸುಲಭವೆ ? ಎಲ್ಲಾದರೂ ಕಾಣಿಸಿಕೊಂಡರೆ ಸಾಲಗಾರರಿಗೆ ಸಿಕ್ಕಿ ಹಾಕಿಕೊಳ್ಳಬಹುದೆಂಬ ಭಯ! ಕ್ಷಣ ಕ್ಷಣಕ್ಕೂ ಇಂಥ ಭಯ-ಅಗೌರವದಿಂದ ಕೂಡಿದ ಜೀವನದಲ್ಲಿ ಸುಖ-ನೆಮ್ಮದಿ ಇರುವುದೆ ? ಮರಣದಂಡನೆ ನಿರೀಕ್ಷಿಸುತ್ತಾ ದಿನದೂಡುವ ಅಪರಾಧಿಗೂ ಇವನಿಗೂ ಏನಾದರೂ ವ್ಯತ್ಯಾಸವಿದೆಯೆ? ಒಂದೆ ಬಗೆಯ ಯಾತನೆ ಅಲ್ಲವೆ ? ನಾನಾ ರೀತಿಯ ಆಕರ್ಷಣೆಯಿಂದ ಕೂಡಿದ ಆಡಂಬರದ ಕ್ಷಣಿಕ ಜೀವನಕ್ಕೆ ಮರುಳಾಗಿ ಅನ್ಯರ ಹಣದಲ್ಲಿ ಬದುಕುವ ಇಂಥ ಲಜ್ಜೆಗೇಡಿಗಳಿಗೆ ಇಂದಿಗೂ ಸಮಾಜದಲ್ಲಿ ಕೊರತೆಯಿಲ್ಲ. ಹೀಗಾಗಿ ಗುರು ಬಸವಣ್ಣನವರು ತಮ್ಮ ಅನುಯಾಯಿಗಳಿಗೆ ಕೆಲವು ಉಪಮೆಗಳಿಂದ ಆಡಂಬರದ ಬದುಕಿನ ಅಪಾಯಗಳನ್ನು ಮನದಟ್ಟು ಮಾಡಿಕೊಟ್ಟು ಉಪದೇಶಿಸುತ್ತಿದ್ದಾರೆ. ಸರಳ ಜೀವನ ಮೌಲ್ಯದ ಬೀಜವನ್ನು ಜನಮಾನಸದಲ್ಲಿ ಬಿತ್ತುತ್ತಿದ್ದಾರೆ. ಅಂತೆಯೇ ಇಂಥ ಬದುಕಿನ ಒಡನಾಟವನ್ನು ಹಾವು-ಹಾವಾಡಿಗನ ಸ್ನೇಹದಂತೆ ಎಂದು ವ್ಯಾಖ್ಯಾನಿಸುತ್ತಿದ್ದಾರೆ. ಅಂದರೆ ಇದು ಬಹಳ ಅಪಾಯಕಾರಿ ಸಂಬಂಧ ಎಂದಾಯಿತು. ಪತಿಪತ್ನಿಮಕ್ಕಳಿಂದಾದ ಸಂಸಾರದ ಮೇಲಿನ ಅತಿಯಾದ ಮೋಹ ಎಂಬ ವಿಷಜಂತು ಇಂಥ ವಿಷಜಂತುವನ್ನು ನೆಚ್ಚಿ ಸಲಹುವ ಮೂಲಕ ತನ್ನ ಬದುಕನ್ನು ಕಟ್ಟಿಕೊಳ್ಳಬಯಸುವವನನ್ನು ಯಾವ ಕ್ಷಣದಲ್ಲಾದರೂ ಕಚ್ಚಿ ಕೊಲ್ಲಬಹುದೆಂಬ ಪರಿಜ್ಞಾನವಿಲ್ಲದ ಹಾವಾಡಿಗನಂತೆ. ಹುಟ್ಟಿದ ಪ್ರತಿಯೊಬ್ಬನೂ ಸಾವನ್ನು ಸಮೀಪಿಸಲೇ ಬೇಕು. ಸಾಯುವುದರೊಳಗೆ ಎಲ್ಲ ರೀತಿಯ ಸುಖಭೋಗಗಳನ್ನು ಅನುಭವಿಸಬೇಕು ಎಂಬ ಆತುರದಿಂದ ಅಕ್ರಮವಾಗಿ ಗಳಿಸಿ ಬದುಕುವುದು. ಹೀಗೆ ಬದುಕಲಿಕ್ಕಾಗಿ ಮಾಡಿದ ಪಾಪಕರ್ಮಗಳೆ, ಮುಂದೆ ಶತೃಗಳಾಗಿ ಕಾಡುತ್ತವೆ. ಆದ್ದರಿಂದ ವಿವೇಕಿಯಾದವನು ಮಹಾದಾನಿಯಾದ ಪರಮಾತ್ಮನನ್ನು ನಂಬಿ 'ನೀನೊಲಿದರೆ ಸಕಲ ಪಡಿಪದಾರ್ಥಗಳು ಇದಿರಲ್ಲಿಪ್ಪವು' ಎಂಬ ಬಸವ ವಾಣಿಯಂತೆ ದೇವರು ಒಲಿದು ಕೊಟ್ಟಾಗ ಸಂತೋಷ-ಸಂತೃಪ್ತಿಯಿಂದ ಎಲ್ಲಾ ಸೌಭಾಗ್ಯಗಳನ್ನು ಅನುಭವಿಸುತ್ತಾನೆ ವಿನಾ ಬಿನ್ನಾಣದ ಕೃತಕ ಬದುಕಿಗೆ ದಾಸನಾಗುವುದಿಲ್ಲ ಎಂದು ಗುರು ಬಸವತಂದೆಯವರು ಭಕ್ತನ ಲಕ್ಷಣವನ್ನು ಎತ್ತಿ ತೋರಿಸಿದ್ದಾರೆ. ನಮಗೂ ಮಾರ್ಗದರ್ಶನ ಮಾಡುತ್ತಿದ್ದಾರೆ.

**ಹಾವಿನ ಬಾಯ ಕಪ್ಪೆ ಹಸಿದು**
**ಹಾರುವ ನೊಣಕ್ಕೆ ಆಸೆಮಾಡುವಂತೆ,**
**ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು**
**ಮೇಲೇಸುಕಾಲ ಬದುಕುವನೊ**
**ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು, ಒಡಲ ಹೊರೆವವರ**
**ಲಿಂಗದೇವನೊಲ್ಲ, ಕಾಣಿರಣ್ಣಾ.** –ಬ.ವ.ದೀ–132

ಇದು ಗುರು ಬಸವಣ್ಣನವರ ತಾಮಸ ನಿರಸನ ಸ್ಥಲದಲ್ಲಿ ಬರುವ ವಚನ. ಇಲ್ಲಿ ಒಂದು ದೃಶ್ಯ ನಮ್ಮ ಕಣ್ಣ ಮುಂದೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಅದೆಂದರೆ ಹಾವು ಹಸಿದಿದೆ. ಅದಕ್ಕೆ ಪ್ರಿಯವಾದ ಆಹಾರ ಕಪ್ಪೆ ಸಿಕ್ಕಿದೆ. ಪಾಪ, ಕಪ್ಪೆಗೂ ಹಸಿವಾಗಿದೆ. ಹಾಗಾಗಿ ಕಪ್ಪೆ ತನ್ನ ಆಹಾರಕ್ಕಾಗಿ ಹಾತೊರೆಯುತ್ತಿದ್ದಾಗ ನೊಣ ಅದರ ಕಣ್ಣಿಗೆ ಬಿದ್ದಿದೆ. ನಿಜಸ್ಥಿತಿ ಹೀಗಿರುವಾಗ ಹಾವು ತನ್ನ ಬಾಯಲ್ಲಿ ಅರ್ಧದಷ್ಟು ಕಪ್ಪೆಯನ್ನು ನುಂಗುತ್ತಿದೆ- ಇದರ ಪರಿವೆಯಿಲ್ಲದ





ಕಪ್ಪೆಯು ತನ್ನ ಮುಂದೆ ಹಾರಾಡುತ್ತಿರುವ ನೊಣಕ್ಕಾಗಿ ನಾಲಗೆಯನ್ನು ಚಾಚಿದೆ! ಇದು ಹೇಗಿದೆ ಎಂದರೆ ಈಗಾಗಲೆ ಮಹಾಪರಾಧ ಮಾಡಿದ ಕಳ್ಳನು ನೇಣುಗಂಬಕ್ಕೇರುವ ಶಿಕ್ಷೆಗೆ ಗುರಿಯಾದಂತಿದೆ. ಶೂಲಕ್ಕೇರಲು ಸಿದ್ಧನಾಗಿರುವ ಕಳ್ಳನಿಗೆ ಕೊನೆಯ ಆಸೆ ಏನು ಎಂದು ಕೇಳಿದಾಗ ಅವನು ಹಾಲುತುಪ್ಪ ಕುಡಿಯುವ ಬಯಕೆಯನ್ನು ವ್ಯಕ್ತಪಡಿಸಿದಂತಿದೆ. ಇಂಥ ದುರಂತ ಅಂತ್ಯವನ್ನು ಸಮೀಸುತ್ತಿರುವ ಕಳ್ಳನಾದರೂ ಪೌಷ್ಟಿಕವಾದ ಹಾಲುತುಪ್ಪವನ್ನು ಕುಡಿದು ಎಷ್ಟು ಕ್ಷಣ ಇದ್ದಾನು !?. ಇದೇ ರೀತಿ ತನ್ನ ಶರೀರ ಪೋಷಣೆಗಾಗಿ ಅಡಿಯಿಂದ ಮುಡಿಯವರೆಗೂ ಹಸಿಸುಳ್ಳುಗಳನ್ನು ಹೇಳುತ್ತಾ ಬದುಕನ್ನು ದೂಡುತ್ತಿರುವ ಜನ ನಮ್ಮ ಸುತ್ತಮುತ್ತ ಸಾಕಷ್ಟು ಇದ್ದಾರೆ. ತನ್ನ ವೈಯಕ್ತಿಕ ಉದ್ದೇಶ ಸಾಧನೆಗಾಗಿ ಅನಗತ್ಯ ಮತ್ತು ಕ್ಷುಲ್ಲಕ ಕಾರಣಕ್ಕಾಗಿ ಸುಳ್ಳು ಹೇಳುವ ಪ್ರವೃತ್ತಿಗೆ ಒಂದು ನಗೆಬುಗ್ಗೆ ಹೀಗಿದೆ.

ಮನೆ ಮುಂದೆ ಆಟ ಆಡುತ್ತಿದ್ದ ಮೊಮ್ಮಗ ಮನೆ ಮುಂದಿನ ಅಂಗಳದಲ್ಲಿ ಕುರ್ಚಿಯ ಮೇಲೆ ಕುಳಿತು ಪೇಪರು ಓದುತ್ತಿದ್ದ ತನ್ನ ತಾತನ ಬಳಿ ಓಡಿ ಬಂದು 'ತಾತ...ತಾತ... ಮನೆಯೊಳಗೆ ಬೇಗ ಹೋಗು..' ಎಂದು ಆತುರವಾಗಿ ಹೇಳಿದ.


ಮೊಮ್ಮಗನ ವರ್ತನೆ ಅರ್ಥವಾಗದ ತಾತ ಕೇಳಿದರು 'ನಾನೇಕೆ ಮನೆಯೊಳಗೆ ಹೋಗಬೇಕು?'

ಅದಕ್ಕೆ ಮೊಮ್ಮಗ ಉತ್ತರಿಸಿದ 'ನಾನು ಶಾಲೆಯಲ್ಲಿ ನಮ್ಮ ತಾತ ಸತ್ತಿದ್ದಾರೆ ಎಂದು ಹೇಳಿ ಈ ದಿನ ರಜ ತೆಗೆದು ಕೊಂಡಿರುವೆ. ಈಗ ನಮ್ಮ ಮೇಷ್ಟ್ರು ಬರುತ್ತಿದ್ದಾರೆ. ಆದ್ದರಿಂದ ಬೇಗ ಒಳಗೆ ಹೋಗು' ಎಂದು ಆಗ್ರಹಿಸಿದಾಗ ತಾತನಿಗೆ ಆದ ಆಘಾತ ಅಷ್ಟಿಷ್ಟಲ್ಲ.


ಸುಳ್ಳು ಹೇಳದೆ ಬದುಕುವ ಅವಕಾಶಗಳು ಸಾಕಷ್ಟು ಇದ್ದರೂ ಮತ್ತು ಸುಳ್ಳು ಹೇಳಲೇಬೇಕಾದ ಅನಿವಾರ್ಯತೆ ಇಲ್ಲದಿದ್ದರೂ ನೀರು ಕುಡಿದಂತೆ ಸುಲಭವಾಗಿ ಸುಳ್ಳುಗಳನ್ನು ಪೋಣಿಸುವ ದುರಭ್ಯಾಸ ಬೆಳೆಸಿಕೊಳ್ಳಬಾರದೆಂದು, ಶೂಲವನ್ನೇರುವ ಕಳ್ಳನಂತೆ ಬದುಕುವುದು ಬಸವಭಕ್ತನಿಗೆ ಸಲ್ಲದೆಂದು ಗುರು ಬಸವತಂದೆಯವರ ಅಭಿಮತ. ಆಡಂಬರದ, ವೈಭವದ ಜೀವನಶ್ಯೆಲಿಗೆ ಶರಣರು ಸಂಪೂರ್ಣ ವಿರುದ್ಧ ಎಂದರೆ ತಪ್ಪಲ್ಲ. ಅದಕ್ಕೆ ಅವರು ಸರಳ ಆದರ್ಶ ಬದುಕಿನ ಸೂತ್ರವಾದ ಕಾಯಕ-ದಾಸೋಹ ಎಂಬ ವ್ಯಕ್ತಿಯ ಉನ್ನತಿ, ಸಮಾಜದ ಪ್ರಗತಿ ಮತ್ತು ರಾಷ್ಟ್ರ ನಿರ್ಮಾಣದ ಗುರಿಯನ್ನು ಹೊಂದಿರುವ ಸಮನ್ವಯ ತತ್ವವನ್ನು ಉಪದೇಶಿಸಿ, ಆಚರಿಸಿ, ತೋರಿಸಿದರು. ಅಂತೆಯೆ ಅಂದು ಕಲ್ಯಾಣಪಟ್ಟಣದಲ್ಲಿ ಎಲ್ಲರೂ ನೀಡುವವರಾಗಿ ಬೇಡುವವರಿಲ್ಲದಂಥ ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಪ್ರತಿಪಾದಿಸುವ ಸಮತೋಲನದಿಂದ ಕೂಡಿದ ಸಂಮೃದ್ಧ-ಸಂತೃಪ್ತ ಸಮಾಜ ನಿರ್ಮಾಣ ಸಾಧ್ಯವಾಗಿತ್ತು.

**ಕಾಯಕ್ಲೇಶದಿಂದ ತನುಮನ ಬಳಲಿ ಧನವ ಗಳಿಸಿ**
**ಗುರುಲಿಂಗಜಂಗಮಕ್ಕೆ ವೆಚ್ಚಿಸಿ**
**ದಾಸೋಹವ ಮಾಡುವ ಭಕ್ತನ ಪಾದವ ತೋರಯ್ಯಾ, ನಿಮ್ಮ ಧರ್ಮ.**
**– ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರು.**

ಸತ್ಯಶುದ್ಧ ಕಾಯಕದಿಂದ ಸಂಪಾದಿಸಿದ ಹಣದಿಂದ ತನ್ನ ಜೀವನಕ್ಕೆ ಅಗತ್ಯವಿದ್ದಷ್ಟು ಇರಿಸಿಕೊಂಡು ಉಳಿದ ಹಣವನ್ನು ದಾಸೋಹ ತತ್ವದ ಮೂಲಕ ಜಂಗಮ ಅಂದರೆ ಜ್ಞಾನ ಪ್ರಸಾರಕ್ಕೆ, ಸಮಾಜಸೇವೆಗೆ ವಿನಿಯೋಗಿಸಬೇಕು.ಇಂಥ ತತ್ವವನ್ನು ಅಳವಡಿಸಿಕೊಂಡವರನ್ನು ತೋರಿಸು ಎಂದು ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರು ಪರಮಾತ್ಮನಲ್ಲಿ ಮೊರೆಯಿಡುತ್ತಿದ್ದಾರೆ. ಷಣ್ಮುಖ ಸ್ವಾಮಿಗಳು ತಮ್ಮೊಂದು ವಚನದಲ್ಲಿ ತನು-ಮನ-ಧನವೆಂಬ ಭಕ್ತನ ತ್ರಿವಿಧ ಸಂಪತ್ತು ಹೇಗೆ ಬಳಕೆಯಾಗಬೇಕೆಂಬ ತಿಳುವಳಿಕೆಯನ್ನು ನೀಡಿದ್ದಾರೆ.













## ಪೂಜ್ಯಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿಯವರ ಪ್ರವಚನ ಮುಕ್ತಾಯ ಸಮಾರಂಭ







# ದೇವರ ಗುಡಿ ಯಾವುದು?



– ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ
ಶ್ರೀ ಚನ್ನಬಸವೇಶ್ವರ ಜ್ಞಾನಪೀಠ,
ಬಸವಗಂಗೋತ್ರಿ, ಬೆಂಗಳೂರು

ದೇವರಲ್ಲಿ ನಂಬಿಕೆ, ಶ್ರದ್ಧೆ ಉಳ್ಳವರೆಂದರೆ ಭಾರತೀಯರು ಭಾರತವು ಧರ್ಮ ಮತ್ತು ಆಧ್ಯಾತ್ಮದ ತವರೂರು. ಇಲ್ಲಿ ಅನೇಕ ಜನ ಸಂತರು, ಮಹಂತರು, ಶರಣರು, ದಾರ್ಶನಿಕರು, ತತ್ವಜ್ಞಾನಿಗಳು ಆಗಿ ಹೋಗಿದ್ದಾರೆ. ಅಂತೆಯೇ ಭಾರತವನ್ನು ಜಗದ್ಗುರು ಎಂದು ಕರೆಯಲಾಗುತ್ತದೆ.

ಧರ್ಮಾಚರಣೆಗಳಲ್ಲಿ ಕರ್ಮಕಾಂಡ ಮತ್ತು ಜ್ಞಾನಕಾಂಡ ಎಂಬ ಪ್ರಕಾರಗಳನ್ನು ಗುರುತಿಸಲಾಗಿದೆ. ಭೌತಿಕವಾದ ಅಗ್ನಿಯಲ್ಲಿ ತುಪ್ಪ, ಪಿತಾಂಬರ ತಿನ್ನುವ ಪದಾರ್ಥ, ಬೆಲೆಬಾಳುವ ವಸ್ತುಗಳನ್ನು ಸುಡುವುದು ಯಜ್ಞ ಅಥವಾ ಕರ್ಮಕಾಂಡ ಎನ್ನಬಹುದು. ಜ್ಞಾನದ ಅಗ್ನಿಯಲ್ಲಿ ಅಜ್ಞಾನ, ಮರೆವು ದುರ್ವ್ಯಸನ, ದುರಾಚಾರ ಅರಿಷಡ್‌ವರ್ಗ, ಅಷ್ಟಮದಗಳನ್ನು ಸುಡುವುದು ಜ್ಞಾನಯಜ್ಞ. ಇದು ಜ್ಞಾನಕಾಂಡ. ಕೇವಲ ಬಾಹ್ಯ ಆಚರಣೆಗಳು ತೋರಿಕೆಗೆ. ಆಚಾರ, ಅನುಭಾವ ಅಳವಡಿಸಿಕೊಳ್ಳುವುದೆಂದರೆ ಜ್ಞಾನ ಕಾಂಡ.

ಈ ಜಗತ್ತನ್ನು ನಿರ್ಮಾಣ ಮಾಡಿದ ಪರಮೋನ್ನತ ಶಕ್ತಿ ದೇವನೊಬ್ಬ ಇದ್ದಾನೆ ಎಂದು ನಂಬಿ ಆತ ಮೆಚ್ಚುವಂತೆ ಬಾಳುವುದೆ ನಿಜವಾದ ಮುಕ್ತಿ. ದೇವರು ಹೊರಗಡೆ ಎಲ್ಲೂ ಪ್ರಕಟವಾಗುವುದಿಲ್ಲ. ಭಕ್ತರ ಹೃದಯ ಕಮಲದಲ್ಲಿಯೇ ನೆಲೆಸಿರುತ್ತಾನೆ.

ಮಾನವನ ದೇಹವೆ ಪರಮಾತ್ಮನು ನೆಲೆಸುವ ಗುಡಿ ಅಥವಾ ಆತನ ವಾಸಸ್ಥಾನ. 'ಬಾಯಿ' ಹೆಬ್ಬಾಗಿಲು, ಮಹಾದ್ವಾರ, ನಮ್ಮ ಕಣ್ಣುಗಳಿಂದಲೆ ಎಲ್ಲವನ್ನು ನೋಡುತ್ತಾನೆ. ಕಣ್ಣುಗಳು ಕಿಟಕಿಗಳಿದ್ದಂತೆ. ನಮ್ಮ ಮೂಗಿನಿಂದಲೆ ದೇವರು ಉಸಿರಾಡುತ್ತಾನೆ. ನಮ್ಮ ಕಿವಿಯಿಂದಲೆ ಎಲ್ಲವನ್ನು ಕೇಳಿಸಿಕೊಳ್ಳುತ್ತಾನೆ. ಆದರೆ ಕಾರ್ಮಿಕಮಲ, ಮಾಯಾಮಲ, ಆಣವಮಲಗಳು ಆವರಿಸಿಕೊಂಡಿರುವುದರಿಂದ ಮನುಷ್ಯನಲ್ಲಿರುವ ಚೈತನ್ಯ ಜೀವಾತ್ಮ ಎನಿಸಿದೆ. ಬ್ರಹ್ಮಾಂಡಗತವಾದ ಚೈತನ್ಯವು ಪರಮ+ಆತ್ಮ=ಪರಮಾತ್ಮ ಎನಿಸಿದೆ. ಕಳ್ಳತನ ಮಾಡುವವರು ಸಿ.ಸಿ. ಕ್ಯಾಮಾರದ ಕಣ್ತಪ್ಪಿಸಿ ಅಥವಾ ಸಂಪರ್ಕವನ್ನು ತಪ್ಪಿಸಿ ಮಾಡಬಹುದು. ಆದರೆ ದೇವನ ಅಂಶವಾದ ಆತ್ಮವು ಸಿ.ಸಿ ಕ್ಯಾಮರಾದಂತೆ ಮನುಷ್ಯನ ಹೃದಯದಲ್ಲಿಯೇ ಇರುವುದರಿಂದ ಅದರ ಕಣ್ತಪ್ಪಿಸಿ ನಾವು ಏನನ್ನೂ ಮಾಡಲು ಸಾಧ್ಯವಿಲ್ಲ. ಅದನ್ನೆ ಅಂತಃಸಾಕ್ಷಿ ಅಥವಾ ಆತ್ಮಸಾಕ್ಷಿ ಎನ್ನುತ್ತೇವೆ. ಆತ್ಮವು ಸದಾ ಒಳ್ಳೆಯ ಕಾರ್ಯಗಳನ್ನೆ ಮಾಡುವಂತೆ ಸೂಚಿಸುತ್ತದೆ. ವಿರೋಧ ಪಕ್ಷದ ನಾಯಕನಂತಿರುವ ಮನಸ್ಸು ಯಾವತ್ತೂ ಕೆಟ್ಟದ್ದನ್ನೇ ಕೇಳಲು, ಕೆಟ್ಟದನ್ನೇ ನೋಡಲು ಅಹಿತಕರವಾದುದನ್ನೇ ಮಾಡಲು ಪ್ರೇರೇಪಿಸುತ್ತದೆ.

ಮನಸ್ಸನ್ನು ತನ್ನ ವಿವೇಕದ ಹಿಡಿತದಲ್ಲಿಟ್ಟುಕೊಂಡು ಇಂದ್ರಿಯಗಳನ್ನು ನಿಗ್ರಹಿಸಿ ಸದ್ಗುರುವಿನಿಂದ ದೀಕ್ಷಾನುಗ್ರಹ ಪಡೆದು ಸಾಧನೆ ಮಾಡಿ ಮಲತ್ರಯ,







ಕರ್ಮತ್ರಯಗಳನ್ನು ಕಳೆದುಕೊಂಡಾಗಲೆ ನಮಗೆ ನಿಜವಾದ ಮುಕ್ತಿ. ಆಗ ಈ ಮೃಣ್ಮಯ ದೇಹದಲ್ಲಿ ಬಂಧಿತನಾದ ಜೀವಾತ್ಮನೆ ಪರಿಶುದ್ಧ ಚೇತನವಾದ ಪರಮಾತ್ಮನಾಗುತ್ತಾನೆ. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು 'ನಾ ದೇವರಲ್ಲದೆ ನೀ ದೇವನೇ?' ಎಂದು ಇಷ್ಟಲಿಂಗವನ್ನು ಪ್ರಶ್ನಿಸುತ್ತಾರೆ. ಸಂಪೂರ್ಣ ಶರಣಾಗತಿಯಿಂದ ದೇವನಿಗಾಗಿ ಅರ್ಪಿಸಿಕೊಂಡು ಸಾಧಕನಲ್ಲಿ ಪೂಜಕ, ಪೂಜ್ಯ, ಪೂಜೆ, ಎಂಬ ತ್ರಿಪುಟಿಯ ಭಾವ ಅಳಿಯುತ್ತದೆ. ಅಂದರೆ ಪೂಜೆ ಮಾಡಿಸಿಕೊಳ್ಳುವವನು ಬೇರೆ, ಪೂಜೆ ಮಾಡುವ ಭಕ್ತ ಬೇರೆ ಎಂಬ ಭಾವನೆ ಇರುವುದಿಲ್ಲ. ನೆನೆವ ಮನವೇ ನಿವಾದ ಬಳಿಕ ಏನ ನೆನೆಯಲಿ? ಎಂದು ಅಕ್ಕಮಹಾದೇವಿತಾಯಿಯವರು ಹೇಳುತ್ತಾರೆ. ಇದೇ ಭಾವಲಿಂಗೈಕ್ಯ ಸ್ಥಿತಿ.

## :: ಕತ್ತಲೆ ಕಳೆಯುವ ಜ್ಯೋತಿ ಮಾತಾಜಿ ::

ಚನ್ನ್ಮಲಾದ್ರಿಯೊಳು ರವಿಯಂತೆ ಉದಯಿಸಿದೆ
ಜ್ಞಾನಾಮೃತದ ಕಿರಣಗಳ ಮನದಲ್ಲಿ ಪಸರಿಸಿದೆ
ಅಮಾವಾಸ್ಯೆಯ ಕಾರ್ಗತ್ತಲೆಯಲ್ಲಿ ಆಕಾಶ ದೀಪವಾಗಿ ಮೂಡಿದೆ
ಅಜ್ಞಾನದ ಕತ್ತಲೆ ಕಳೆಯುವ ಜ್ಯೋತಿಯಾದೆ.

ಅಕ್ಕಮಹಾದೇವಿಯ ಸಾಕ್ಷಾತ್ಕರಿಸಿಕೊಂಡೆ
ಲಿಂಗದೇವನಲ್ಲಿ ಬಸವಣ್ಣನ ಕಂಡೆ
ಗುರುಲಿಂಗಾನಂದರಿಂದ ದೀಕ್ಷೆಯ ಪಡೆದೆ
ವಿಶ್ವಕ್ಕೇ ಪ್ರಥಮ ಮಹಿಳಾ ಜಗದ್ಗುರುವಾದೆ.

ಲಿಂಗಾಯತ ತಬ್ಬಲಿ ಮಗುವನ್ನೆತ್ತಿಕೊಂಡೆ
ಅರುಹಿನ ಪಥದಲಿ ಕೈಹಿಡಿದು ನಡೆಸಿದೆ
ಲಿಂಗದೇವನೆಂಬ ಸಂಜೀವಿನಿಯ ಕರುಣಿಸಿದೆ
ಭಕ್ತಸತ್ತ ಮನದಲ್ಲಿ ನವಚೈತನ್ಯವನ್ನೊದಗಿಸಿದೆ.

ತತ್ವದ ಖಡ್ಗವ ಹಿಡಿದು ಜಾತಿವಾದಿಗಳ ವಿರುದ್ಧ ಹೋರಾಡಿದೆ
ರಣರಂಗದಿ ಗೆದ್ದು ಧರ್ಮದ ಮರ್ಮವ ಅರುಹಿಸಿದೆ
ಲಿಂಗದೇವನ ಭಕ್ತರ ಮನದಲ್ಲಿ ಮನೆಮಾಡಿ ನೆಲೆಸಿದೆ
ಜಿಡ್ಡುಗಟ್ಟಿದ ಸಂಪ್ರದಾಯವ ತಿಕ್ಕಿತೊಳೆದು ಸಲುಹಿದೆ.

ಅಮೃತವೆಂದು ವಿಷಕುಡಿವವರ ನೋಡಿ ನೊಂದು ನಲುಗಿದೆ
ವಚನ ವಾಙ್ಮಯದ ಸುಧೆಯನುಣಿಸಿ ಬದುಕಿಸಿದೆ
ಅಜ್ಞಾನದ ಕೊಳೆಯ ತೊಳೆದು ಸಲುಹಿದೆ
ಜ್ಞಾನದ ವಸ್ತ್ರವ ಧರಿಸಿ ಮುನ್ನಡೆಸಿದೆ.

ಸಾಗರದಾಳದಿ ಹುದುಗಿರುವ ಮುತ್ತಂತೆ ನಿಮ್ಮ ಜ್ಞಾನ
ಅಜ್ಞಾನಿಗಳಿಗೆಲ್ಲಿ ಗೊತ್ತು ನಿಮ್ಮ ಸ್ವರೂಪ
ನಿಂದೆಗಳಿಗೆ ಎದೆಗುಂದದೆ ನಡೆದ ಧೀರಯೋಗಿಯೇ
ಸದಾ ಬೆಳಗುತ್ತಿರಲಿ ಭಕ್ತರ ಮನದಲ್ಲಿ ನಿಮ್ಮ ಕರುಣೆಯ ದೀಪ.

ಭಕ್ತಿಯ ಬರಗಾಲದಿ ಜ್ಞಾನದ ಅಮೃತವರ್ಷಿಣಿ ನೀವೆ
ನಿರ್ಭೀತಿಯ ನಿಲುವ ತುಳಿದ ನಿಜಯೋಗಿ ನೀವೆ
ಜಾತಿವಾದಿಗಳ ವಿರುದ್ಧನಿಂತ ಓ ವಿಶ್ವಚೇತನವೆ
ಇಟ್ಟ ಹೆಜ್ಜೆ ಹಿಂತೆಗೆಯದ ಶರವೇಗದ ವಾಣಿಯ ಗುರುವೆ.

ಮರ್ತ್ಯದ ಮಣಿಹ ಪೂರೈಸಲು ಬಂದ ಬಸವಾತ್ಮಜೆಯೇ
ಸ್ತ್ರೀಕುಲಕ್ಕೆ ನಾಂದಿಯಾದ ಸಚ್ಚಿದಾನಂದ ಸತಿಯೇ
ಅಕ್ಕನ ಅವತಾರಿಯಾದ ಚನ್ನ್ಮಲಾದ್ರಿಯ ಚಿತ್ಕಳೆಯೇ
ನಿಮ್ಮ ಅಡಿಗಳಿಗೆ ಎನ್ನ ಅನಂತ ನಮನಗಳು ತಾಯೆ.

ರಚನೆ,
ಶರಣ. ಆನಂದ. ಶಿವಕುಮಾರ. ಹನಗಂಡಿ
"ಬಸವ ಸ್ಮೃತಿ", ಮ.ನಂ.72, ಗಣೇಶ ನಗರ,
ಹಳಿಯಾಳ ರೋಡ, ಧಾರವಾಡ – 03
ಮೊ: 9481009692

ಆಚಾರ | ಅರಿವು | ಅನುಭಾವ

## ಕೀಳು ರಾಜಕೀಯ ಚರ್ಚೆಯಿಂದ ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆ!!



ಶ್ರೀಮೂಜ್ಯಶ್ರೀ ಬಸವಪ್ರಭು ಸ್ವಾಮೀಜಿ.

ಪ್ರಜಾಪ್ರಭುತ್ವ ಸರಕಾರವೆಂದರೆ ಪ್ರಜೆಗಳಿಂದ ಪ್ರಜೆಗಳಿಗೋಸ್ಕರ ಪ್ರಜೆಗಳೇ ಆಳುವ ಸರಕಾರಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆ ಎಂಬುದು ಕೇವಲ ಶಬ್ದಗಳಾಗಿ ಉಳಿದವೆ? ಅಥವಾ ದಿನದಿನಕ್ಕೆ ತನ್ನ ಮೌಲ್ಯವನ್ನು ಕಳೆದುಕೊಂಡು ನಿರಂಕುಶ ಪ್ರಭುತ್ವಕ್ಕೆ ದಾರಿ ಮಾಡಿಕೊಡುತ್ತಿದೆಯೆ? ಇಲ್ಲವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಏನೆಲ್ಲಾ ನಡೆಯಬಹುದು ಎಂಬ ಅಪವಾದಕ್ಕೆ ನಮ್ಮ ಸಂವಿಧಾನ ತನ್ನ ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತಿದೆಯೇ? ಎಂಬ ಪ್ರಶ್ನೆಗೆ ಉತ್ತರಕ್ಕಾಗಿ ಚಿಂತನೆ ಮಾಡಿದರೆ ಇಂದಿನ ಎಲ್ಲಾ ರಾಜಕೀಯ ಪಕ್ಷಗಳು ವರ್ತನೆ ಮತ್ತು ಕೀಳು ರಾಜಕೀಯ ಗುಣದಿಂದ ಹೌದು ಎಂದು ವಿಧಿಯಿಲ್ಲದೆ ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆಲ್ಲಾ ವಿಚಾರಗಳ ಸರಮಾಲೆ ನನ್ನ ಮನಸ್ಸನ್ನು ಕೆದಕುವ ಕಾರಣವೂ ಬಲವಾಗಿದೆ. ಇಂದಿನ ದಿನಮಾನದಲ್ಲಿ ನಡೆಯುವ ಅಧಿವೇಶನದ ಕಲಾಪಗಳು ಏನಾದರೂ ಒಂದು ಸಮಾಜದ, ಜನಾಂಗದ, ದೇಶದ ಸ್ವಾಸ್ಥ್ಯ ಹಾಳು ಮಾಡುವಂತಹ ತಮ್ಮ ವೈಯಕ್ತಿಕ ವಿಚಾರಗಳು ತಳಬುಡವಿಲ್ಲದ ಮಾತುಗಳನ್ನು ಮುಂದು ಮಾಡಿಕೊಂಡು ಪ್ರಜಾತಂತ್ರದ ದೇಗುಲದಲ್ಲಿ ಇಡೀ (ಅಧಿವೇಶನ) ಕಲಾಪವನ್ನು ಬಲಿ ತೆಗೆದುಕೊಂಡು ಬಿಡುವ ಕೆಟ್ಟ ರಾಜಕೀಯ ರಾಕ್ಷಸಿ ಪ್ರವೃತ್ತಿಯು ಬಲಗೊಳ್ಳುತ್ತಿರುವುದು ಶೋಚನೀಯ. ಇಂಥದ್ದನ್ನು ನೋಡಿ ಪೇಚಾಡುತ್ತಿರುವ ನಾವು ನಿಜವಾಗಿಯೂ ಅಮಾಯಕರು. ಅಂತಹ ಅವಿವೇಕ ವಿಚಾರಕ್ಕೆ ಸಾಕ್ಷಿಯಾಗಿ ನಿಂತು ನಮ್ಮಿಂದ ಏನೂ ನಡೆದಿಲ್ಲವೆಂದು ಸಬೂಬು ಹೇಳಿ ಹುಂಬತನ ಪ್ರದರ್ಶಿಸುತ್ತಾ ನೈತಿಕ ಅಧಃಪತನಕ್ಕೆ ಕಾರಣವಾಗಿ ತಮ್ಮೆಲ್ಲ ತಪ್ಪುಗಳನ್ನು ಮುಚ್ಚಿಕೊಂಡು ಜಾತಿಕಾರಣ, ಧರ್ಮಕಾರಣ ಮುಂದು ಮಾಡಿ ಭ್ರಷ್ಟಾಚಾರ, ಉಗ್ರವಾದ, ಆತಂಕವಾದಗಳಲ್ಲಿ ಸಿಕ್ಕು ಅದರಿಂದ ಹೊರಬರಲಾಗದೆ ಅತಿಜಾತಿಗಳಲ್ಲಿ ವೈಷಮ್ಯತೆಯ ವಿಷಬೀಜ ಬಿತ್ತಿ ಜ್ಯಾತ್ಯಾತೀತ ರಾಷ್ಟ್ರದ ಗೌರವ ಘನತೆಯನ್ನು ಹಾಳು ಮಾಡಿ ವಿಶ್ವದ ಭೂಪಟಲದ ಮುಂದೆ ಸ್ವಚ್ಛ ಮನಸ್ಸನ್ನು, ಮಹೋನ್ನತಿಯ ಮಮತೆಯ ಮಡಿಲಿನ ಭಾರತಾಂಬೆಯನ್ನು ಭ್ರಷ್ಟಾಚಾರದಲ್ಲಿ 72ನೆಯ ಸ್ಥಾನಕ್ಕೆ ನಿಲ್ಲಿಸಿರುವ ದುರಂತ ಸನ್ನಿವೇಶವನ್ನು ಕಂಡು ಮರುಗುವ ನಮಗೆಲ್ಲಾ ಉತ್ತರ ಯಾರು ಕೊಟ್ಟಾರು? ಯಾವಾಗ ಸಿಕ್ಕೀತು? ಧರ್ಮಪಿತ ಬಸವಣ್ಣನವರು ಹೇಳಿದಂತೆ ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹೊತ್ತಿ ಉರಿದರೆ ನಿಲ್ಲಲುಬಹುದೆ?...ತಾಯಿ ಮೊಲೆಹಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆನಯ್ಯಾ ಲಿಂಗದೇವಾ ಎನ್ನುವಂತೆ ನಮ್ಮನ್ನಾಳುವ ರಾಜಕೀಯ ಪುಂಡರನ್ನು ನೋಡಿ ತೆಪ್ಪಗಿದ್ದು ಬಿಡುವ ಹಣೆಬರಹ ನಮ್ಮದಾಯಿತೆ? ಅಥವಾ ಹತ್ತರಲ್ಲಿ ಹನ್ನೊಂದನೆಯವರಾಗಿ ಅವರ ಚೆಲ್ಲಾಟವನ್ನು ನೋಡಿ ಸುಮ್ಮನೆ ಕುಳಿತುಕೊಳ್ಳಬೇಕೆ? ತಿಳಿಯದು.

ನೈತಿಕ ಮತ್ತು ಧಾರ್ಮಿಕ ತಳಹದಿಯ ಮೇಲೆ 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಶ್ರೇಷ್ಠ ರಾಜಕಾರಣ ಮುತ್ಸದ್ದಿಯಾಗಿ ಜಗ ಬದುಕುವ ಜನ ಬದುಕುವ ತತ್ವವನ್ನು ನೀಡಿ ಜಾತಿಭೇದವಿಲ್ಲದೆ, ವರ್ಣಭೇದವಿಲ್ಲದೆ, ಲಿಂಗಭೇದವಿಲ್ಲದೆ, ವರ್ಗಭೇದಿಲ್ಲದೆ ವಿಶ್ವ ಸಹೋದರತೆ ಮೆರೆಯುವ ಯೋಜನೆಯನ್ನು ರೂಪಿಸಿ ಸಕಲ ಜೀವಾತ್ಮರುಗಳಿಗೆ ಲೇಸ ಬಯಸುವ ಕಲ್ಯಾಣ ರಾಜ್ಯವನ್ನು ಕಟ್ಟಿ ಸಾಕಾರ ಮಾಡಿ ತೋರಿಸಿದರು. ಅವರು ಸ್ವಾಭಿಮಾನಿಯಾಗಿ ಯಾರ ಒತ್ತಡಕ್ಕೂ ಮಣಿಯದೆ ದೇವನ ಮತ್ತು ತನ್ನ ಅಂತರಾತ್ಮದ ಸಾಕ್ಷಿಯಾಗಿ ಆದರ್ಶ ರಾಜ್ಯದ ಕನಸುಗಾರ ಗ್ರೀಸ ದೇಶದ ತತ್ವಜ್ಞಾನಿ ಪ್ಲೇಟೋನಗಿಂತ ಒಂದು ಹೆಜ್ಜೆ ಮುಂದೆ ಹೋಗಿ ರಾಜಕೀಯ ವ್ಯವಸ್ಥೆಯನ್ನು ತಿಳಿಗೊಳಿಸಿದರು. ಆದರೆ ಇಂದಿನ ರಾಜಕೀಯ ಇಚ್ಛಾಶಕ್ತಿಗಳು ಗುರು ಬಸವಣ್ಣನವರ ವಚನಗಳನ್ನು ಕಾಟಾಚಾರಕ್ಕೆ ಬಾಯಿಯಲ್ಲಿ ಹೇಳಿ ಅವರ ಒಂದೂ ವಿಚಾರವನ್ನು ಆಚಾರದಲ್ಲಿ ತರಲಾಗದಿರುವುದು ದುರದೃಷ್ಟಕರ. ಅವರು "ಕೊಲ್ಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ ಕುಲವೇನೊ ಆವಂದಿರ ಕುಲವೇನೊ ಸಕಲ ಜೀವಾತ್ಮರಿಗೆ ಲೇಸನು ಬಯಸುವನೇ ಕುಲಜನು". ಎಂದೂ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ...." ಎಂದೂ ಸಪ್ತ ಸೂತ್ರಗಳ ನೀತಿ ಮಾರ್ಗವನ್ನು ಹೇಳಿ ಯಾವ ಜಾತಿ ವ್ಯವಸ್ಥೆಯನ್ನು ಬೇರು ಸಮೇತ ಕಿತ್ತೆಸೆದು ಇವನಾರವ ಇವನಾರವ ಇವನಾರವ ಎನ್ನದೆ ಇವನಮ್ಮವ ಇವನಮ್ಮವ ಇವನಮ್ಮವ ಎಂದು ಎಲ್ಲರನ್ನು ಸಹೋದರತೆಯಿಂದ ಕಂಡು ಆತ್ಮಜ್ಯೋತಿ ತತ್ವವನ್ನು ಹಿಡಿದರೊ "ಹೊನ್ನಿನೊಳಗೊದೊರೆಯ ವಸ್ತ್ರದೊಳಗೊಂದೆಳೆಯ ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಲಿಂಗದೇವಾ" ಎಂದು ಹೇಳುತ್ತಾ 'ಲಂಚ ವಂಚನೆಗೆ ಕೈಯಾನದ ಭಾಷೆ, ನಿಮ್ಮ ಸೊಮ್ಮಿಂಗೆ ಸಲಿಸುವೆನಲ್ಲದೆ ಅನ್ಯಕ್ಕೆ ಸಲಿಸೆನು' ಎಂದು ನಂಟರಿಷ್ಟರು ಬಂದರೆ ಸಮಯವಿಲ್ಲೆಂದು ಒಡೆಯರಾದ ಪ್ರಜೆಗಳು ಬಂದರೆ ಗುಡಿತೋರಣವ ಕಟ್ಟಿ ಸ್ವಾಗತಿಸುತ್ತೇನೆಂದು ಪ್ರಧಾನಿಯಾದ ಗುರು ಬಸವಣ್ಣನವರು, ಬಯಸದೆ ಬಂದಿದ್ದು ಲಿಂಗದೇವನು ಅನುಗ್ರಹಿಸಲ್ಪಟ್ಟ ಪ್ರಸಾದವೆಂದು ಬಗೆದು ಎನಗಿಂತ ಕಿರಿಯರಿಲ್ಲ ಶಿವಭಕ್ತಿಗಿಂತ ಹಿರಿಯರಿಲ್ಲ ಎಂದು ಭಾವಿಸಿ ವಿನಯ ಭಾವದಿಂದ ಪ್ರತಿಜ್ಞೆ ಸ್ವೀಕರಿಸಿ ಭ್ರಷ್ಟತೆಯನ್ನು ಧಿಕ್ಕರಿಸಿ ಸ್ವಾಭಿಮಾನಕ್ಕೆ ಧಕ್ಕೆಯಾಗುವ ಮೀಸಲಾತಿಗೆ ತಿಲಾಂಜಲಿ ನೀಡುವ 'ಕೆಡೆ ನಡೆಯದೆ ಕೆಡೆ ನುಡಿಯದೆ ಅನ್ಯರ ಪ್ರಸಾದಿಸದಿದ್ದಡೆ ಏನ ಕೊಡನಯ್ಯ ಲಿಂಗವು, ಏನ ಮಾಡೆನಯ್ಯ ಲಿಂಗವು ಸತ್ಯವುಳ್ಳ ಸದ್ಭಕ್ತಂಗೆ ಇದೇ ದಿವ್ಯ ಲಿಂಗದೇವಾ' ಎಂಬ ವಚನವನ್ನು ಹೇಳಿ ಸತ್ಯಶುದ್ಧ ಕಾಯಕ ಮಾಡಿ ಅಂದಂದಿಗೆ ಸಂತೃಪ್ತಿಪಟ್ಟುಕೊಂಡು ಬದುಕುವ ಸ್ವಾಸ್ಥ್ಯ ಸಮಾಜವನ್ನು ಆತ್ಮ ಬಲದ ಮನುಷ್ಯತ್ವದಿಂದ ಎತ್ತಿ ಹಿಡಿದರೋ ಅದೆಲ್ಲವೂ ಇಂದು ಕೇವಲ ಆದರ್ಶ ನೀತಿಗಳಾಗಿ ಪುಸ್ತಕದಲ್ಲಿ ಇತಿಹಾಸವಾಗಿ ಉಳಿದು ಬಿಟ್ಟಿವೆಯೇ ವಿನಃ ಅಂತಹ ವಿಚಾರಕ್ಕೂ ತಮಗೂ ಏನೂ ಸಂಬಂಧ ಇಲ್ಲವೆಂಬಂತೆ ರಾಜಕೀಯ ಹಿತಾಸಕ್ತಿಗಳು ಯಾರನ್ನೊ ಓಲೈಸಿಕೊಳ್ಳುವುದಕ್ಕಾಗಿ ಮತ್ಯಾರನ್ನೊ ಉಳಿಸಿಕೊಳ್ಳುವದಕ್ಕಾಗಿ ಮೀಸಲಾತಿ ಸೋಗಿನಲ್ಲಿ ದುರ್ಬಲರನ್ನು ಮತ್ತಷ್ಟೂ ದುರ್ಬಲರನ್ನಾಗಿಸುವ ಹುನ್ನಾರ ಧರ್ಮಪಿತರು ಒಪ್ಪಲಾರರು. ಜಾತಿಯಾಧಾರಿತ ಮತ

ಬ್ಯಾಂಕನ್ನು ಸೃಷ್ಟಿಸಿ ಓಟುಗಳನ್ನು ಕಬಳಿಸಿ ಮತ್ತೊಮ್ಮೆ ಮಗದೊಮ್ಮೆ ಚುನಾವಣೆಯಲ್ಲಿ ಗೆದ್ದು ದೇಶದ ಭವಿಷ್ಯದ ಬಗ್ಗೆ ಚಿಂತಿಸಲು ಹೋಗದೆ ವ್ಯಕ್ತಿ ಪ್ರತಿಷ್ಠೆಗೆ ಜೋತುಬಿದ್ದು ಐಶ್ವೈರ್ಯ ಅಂಧಕಾರವೆಂಬ ಗಂವ್ವರದ ಸುಖದ ಸುಪ್ಪತ್ತಿಗೆಯಲ್ಲಿ ಹೊರಳಾಡುವವರಿಗೆ ಬಸವಣ್ಣನವರ ಆದರ್ಶದ ಮಾತುಗಳು ರುಚಿಸಲಾರವು. ತಮ್ಮ ಅಟ್ಟಹಾಸದಿಂದ ಮಹಾತ್ಮರಿಗೆ, ಭಾರತಾಂಬೆಗೆ ಮಾಡುವ ಬಹುದೊಡ್ಡ ಅಪಚಾರಕ್ಕೆ ಗುರಿಯಾಗುತ್ತಿರುವರಲ್ಲ! ಎಂದು ಅಂಬೋಣ; ಅದು ನಮ್ಮ ಸಮಾಧಾನಕ್ಕಾಗಿ. ಇದಕ್ಕೆಲ್ಲಾ ಕಾರಣವಾಗಿ ಒಂದುಮೋಜಿನ ಮನೆಯಂತಿರುವ ರಾಜ್ಯ ಮತ್ತು ರಾಷ್ಟ್ರದ ಸಂಪತ್ತುಗಳು ಇತ್ತೀಚಿನ ದಿನಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನಡೆಸುವ ರಾಜ್ಯ, ರಾಷ್ಟ್ರದ ಅಧಿವೇಶನಗಳ ಕಲಾಪಗಳು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಮಾತಿಗೆ ಸಾಕ್ಷಿಯಾಗಿ ತಮ್ಮ ಮೂಕ ರೋದನೆ ಮುಂದುವರೆದಿದೆ.

ನೈತಿಕತೆಯ ಮೇಲೆ ಪ್ರತಿಜ್ಞೆ ಸ್ವೀಕರಿಸಿ ಅಧಿಕಾರದ ಚುಕ್ಕಾಣಿ ಹಿಡಿದ ರಾಜಕಾರಣಿಗಳು ಆ ಪ್ರತಿಜ್ಞೆಗಳ ಆತ್ಮಾವಲೋಕನ ಮಾಡಿಕೊಳ್ಳುವಷ್ಟು ಪುರುಸೊತ್ತಿಲ್ಲ. ಅಂದಾಗ ಅವರವರಿಗೆ ಹೇಗೆ ತಾನೆ ಅರ್ಥವಾದೀತು? ಇವರು ಮಾಡುವ ಭ್ರಷ್ಟ, ನೀಚ ಕೃತ್ಯಗಳು ಎಂತಹ ಹುಚ್ಚನಿಗಾದರೂ ತಿಳಿಯುವುದು. ಆದರೂ ಜನಸಾಮಾನ್ಯರಿಗೆ ಕಣ್ಣಿಗೆ ಮಣ್ಣು ಎರಚಿ ಸತ್ಯವನ್ನು ಮರೆಮಾಚಿ ಏನೂ ನಡೆದಿಲ್ಲವೆಂಬಂತೆ ರಾಜಾರೋಷವಾಗಿ ಇದ್ದು ಬಿಡುತ್ತಾರೆ. ಇವರಿಗೆ ಧಾರ್ಮಿಕ ಗುರುಗಳ ಆಶೀರ್ವಾದ, ಆಣೆ ಪ್ರಮಾಣಗಳು ಬೇರೆ ಕೇಡು. 'ಅಡಿಗಡಿಗೆ ದೇವರಾಣೆ ಅಡಿಗಡಿಗೆ ಭಕ್ತರಾಣೆ' ಎಂಬ ಗುರು ಬಸವಣ್ಣನವರ ವಚನ ಇಂಥವರಿಗೆ ಹೇಳಿ ಮಾಡಿಸಿದಂತಿದೆ. ಇವರ ನೀಚ ಕೆಲಸಗಳು ಒಂದೆ ಎರಡೆ ತಾವು ಮಾಡಿದ ತಪ್ಪನ್ನು ಮುಚ್ಚಿಕೊಳ್ಳಲು ಒಬ್ಬರ ಮೇಲೆ ಒಬ್ಬರು ಹಾಕಿ, ಒಬ್ಬರ ಕಾಲು ಮತ್ತೊಬ್ಬರು ಎಳೆಯುತ್ತಾ ಒಬ್ಬರ ಮೇಲೊಬ್ಬರು ಗೂಬೆ ಕೂಡಿಸುವ ತಂತ್ರಗಾರಿಕೆ ಚೆನ್ನಾಗಿ ಮನದಟ್ಟು ಮಾಡಿಕೊಂಡಿರುತ್ತಾರೆ. ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂಬ ಲೆಕ್ಕಾಚಾರದ ಈ ಆಸಾಮಿಗಳು ಮಾಡುವ ಘನಂದಾರಿ ಚರ್ಚೆಗಳೇನು ಗೊತ್ತೆ? ತಮ್ಮ ಸಂಬಳದ ಬಡ್ತಿ ವಿಚಾರ, ವೈಯಕ್ತಿಕ ಹೆಂಡತಿ ಮಕ್ಕಳ ವಿಚಾರ, ಉಡುಗೆ ತೊಡುಗೆ, ಸೂಟು ಬೂಟು, ವಾಚು, ಕನ್ನಡಕದ ವಿಚಾರ, ಸ್ನೋ ಪೌಡರ ವಿಚಾರ, ಲಿಪಿಸ್ಟಿಕ್, ಫೇರೆನ್ ಲೌಲಿ ವಿಚಾರ ಹೀಗೆ ತಮಗೆ ಲಾಭವಾಗಿ ವಾಮ ಮಾರ್ಗದಿಂದ ದುಡ್ಡು ಗಳಿಸುವ ಯೋಜನೆಗಳ ವಿಚಾರ ಏನೋ ಆಗೊಮ್ಮೆ ಈಗೊಮ್ಮೆ ಊಟಕ್ಕೆ ಉಪ್ಪಿನ ಕಾಯಿ ಎನ್ನುವ ಹಾಗೆ ಕೆಲಸಕ್ಕೆ ಬಾರದ ಯೋಜನೆಗಳನ್ನು ಜಾರಿಗೆ ತರುವುದು. ಅವೇ ಯೋಜನೆಗಳು ಸರಿಯಾಗಿ ಜನ ಸಾಮಾನ್ಯರಿಗೆ ಮುಟ್ಟಿಸದೆ ಇರುವ ಅಧಿಕಾರಿಗಳ ಎತ್ತಂಗಡಿಯ ವಿಚಾರ ಕುರಿತು ಪರ ವಿರೋಧಗಳ ಚರ್ಚೆಗಳು. ಅಬ್ಬಾ! ಮುಗಿದೆ ಹೋಯಿತು ಈ ಎಲ್ಲಾ ಚರ್ಚೆಗಳ ಕಲಾಪ. 'ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ' ಬಂದ ದಾರಿಗೆ ಸುಂಕವಿಲ್ಲದೆ, ನಷ್ಟವೇನೂ ಆಗದೆ ತಮ್ಮ ಕ್ಷೇತ್ರಕ್ಕೆ ಹೋಗಿ ವಿಶ್ರಾಂತಿ ಗಿಸ್ರಾಂತಿ ನಂತರ ಇದ್ದದ್ದೇ ಮೊಸಳೆ ಕಣ್ಣೀರು. ಅಲ್ಲಿ ಜನಗಳ ಮುಂದೆ ಆಲಾಪ. ಇಷ್ಟಕ್ಕಾಗಿಯೇ ನಾವು ನಿಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿ ಕಳುಹಿಸಿದ್ದು ಎಂದು ಜನ ಅಂದುಕೊಂಡದ್ದು ಆಯಿತು. ಪಾಪ ಸಣ್ಣ ಧ್ವನಿಯಲ್ಲಿ ಎತ್ತರದ ತರಾಟೆಯನ್ನು







ತೆಗೆದುಕೊಳ್ಳದ ನಿತ್ರಾಣ ಸ್ಥಿತಿಯಲ್ಲಿ ನೀವು ಅವರನ್ನು ಇಟ್ಟಿದ್ದಕ್ಕೆ ಕಾರಣವು ಉಂಟು. ನಾಯಿಗೆ ಬಿಸ್ಕತ್ತು ಹಾಕುವಂತೆ ಚುನಾವಣೆಯಲ್ಲಿ ಒಂದಿಷ್ಟು ಕಾಸು ಕೊಟ್ಟು ಓಟಿಗಾಗಿ ಅವರನ್ನು ಖರೀದಿಸಿ ವರ್ಷ ಪೂರ್ತಿ ಸತತ ಶವದಂತೆ ಮಲಗಿಸಿ ಬಿಡುವಿರಿ. ಎಂಜಲವನ್ನು ತಿಂದ ನಾಯಿಯ ನಂಬಿಕೆಯಂತೆ ನಿಮ್ಮನ್ನು ನಂಬಿದ್ದಕ್ಕೆ ನೀವು ಅನುಸರಿಸುವ ಈ ಮಾರ್ಗಕ್ಕೆ ಯಾರು ಅಡ್ಡಿ ಮಾಡಿಯಾರು? ಹೇಳಿ ಎಗ್ಗಿಲ್ಲದೆ ನಡೆಸುವ ನಿಮ್ಮ ಈ ವರ್ತನೆಯನ್ನು ಕಂಡು ಈ ಹಿಂದೆ ನಾನು ಸಾಧಕ ಇದ್ದಾಗ ನನ್ನೊಬ್ಬ ಗೆಳೆಯ ಹಾಡಿದ ಈ ಹಾಡು ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತವೆನಿಸುತ್ತದೆ:

ಮಾತ ಆಡಿದರೆ ಮುತ್ತು ಒಡೆದರೆ
ಮರಳಿ ಬರುವುದಲ್ರೊ ಅದು ಬ್ಯಾರೆನೆ ಐತೆ
ದೊಡ್ಡ ದೊಡ್ಡ ಪ್ಯಾಟ್ಯಾಗೆ ಕಿಸೆ ಹೊಡಿತಾರೆ
ಜೈಲಿಗೆ ಖಳಿಸಿಲ್ರೊ ಅದು ಬ್ಯಾರೆನೆ ಐತೆ
ಬಿಳಿ ಹಾಳೆ ಮೇಲೆ ಕೆಲಸ ಮಾಡ್ತಾರ
ಕೆಲಸೇನು ಆಗಿಲ್ರೊ ಅದು ಬ್ಯಾರೆನೆ ಐತೆ
ಗೋದಾಮನ್ಯಾಗಿನ ಅಕ್ಕಿಯಲ್ಲಾ
ಹೆಗ್ಗಣ ತಿಂದಿಲ್ರೊ ಅದು ಬ್ಯಾರೆನೆ ಐತೆ
ಸೀಮೆ ಎಣ್ಣೆ ಬ್ಯಾರಲ್ ಗೆಲ್ಲಾ
ತೂತೇನು ಬಿದ್ದಿಲ್ರೊ ಅದು ಬ್ಯಾರೆನೆ ಐತೆ
ವರ್ಷಕೊಮ್ಮೆ ಎಲೆಕ್ಷನ ಮಾಡ್ತಾರ
ಊರು ಉದ್ಧಾರಕಲ್ರೊ ಅದು ಬ್ಯಾರೆನೆ ಐತೆ
ಹೆಂಗೊ ಏನೊ ಆರಿಸಿ ಬರ್ತಾರ
ನನಗೇನು ಗೊತ್ತಿಲ್ರೊ ಅದು ಬ್ಯಾರೆನೆ ಐತೆ

ನೂರಾರು ದಿನಗಳಿಂದ ಕುಡಿಯುವ ನೀರಿಗಾಗಿ ರೈತ ತಾನು ಬೆಳೆದ ಬೆಳೆಗೆ ಬೆಂಬಲ ಬೆಲೆಗಾಗಿಯೋ, ತಮ್ಮ ಊರಿನ ರಸ್ತೆಗಾಗಿಯೋ, ನೌಕರಿಗಾಗಿಯೋ ಬೇರೆ ಬೇರೆ ಕಾರಣದಿಂದ ಈ ದೇಶದ ಜನ ತಮ್ಮ ಹೆಂಡತಿ ಮಕ್ಕಳು, ಮನೆ ಕುಟುಂಬ ಊರು, ಕೇರಿ ಕೆಲಸವೆಲ್ಲ ಬಿಟ್ಟು ಸಾರ್ವತ್ರಿಕ ಪ್ರತಿಭಟನೆ ಮಾಡಲು ನಿಮ್ಮ ದಪ್ಪ ಚರ್ಮದ ಕಿವಿಗೆ ಕೇಳಿಸಲೆಂದು ನಗರಗಳಿಗೆ ಬಂದರೆ ಲಾಠಿ ಚಾರ್ಜ ಮಾಡಿಯೋ ಇಲ್ಲವೆ ನಿಮ್ಮ ಹುಂಬತನದ ಹೇಳಿಕೆಯಿಂದ ಮೂಗಿಗೆ ತುಪ್ಪ ಸವರುವ ಭರವಸೆ ನೀಡಿ ಅವರು ಪ್ರತಿಭಟನೆ ಹಿಂತೆಗೆದುಕೊಂಡ ಮೇಲೆ ಅವರಿಗಾಗಿ ಏನೊಂದು ನಿರ್ಧಾರ ತೆಗೆದುಕೊಳ್ಳದೆ ಅವರನ್ನು ವಂಚಿಸುವುದು ಇನ್ನೂ ಒಂದು ಕಡೆ ಸಾಕಷ್ಟು ಸಾಲ ಮಾಡಿ ಕಷ್ಟಪಟ್ಟು ಓದಿ ಅರ್ಹತಾ ಪರೀಕ್ಷೆಗಾಗಿ ದುಡ್ಡು ತುಂಬಿ ಅದನ್ನು ಪಾಸು ಮಾಡಿಕೊಳ್ಳಲು ಹರಸಾಹಸ ಪಟ್ಟು ಪರೀಕ್ಷೆ ಬರೆದರೂ, ವರ್ಷಗಳೆ ಕಳೆದರೂ ಹುದ್ದಗೆ ತುಂಬಿಸಿಕೊಳ್ಳದೆ ಇರುವುದು. ಹೇಗಾದರು ಮಾಡಿ ಸರಕಾರಿ ಹುದ್ದೆಯನ್ನು ಅಲಂಕರಿಸಬೇಕೆಂದು ಎಂ. ಎ. ಪಿ.ಎಚ್.ಡಿ ಪಡೆದ ವಿದ್ಯಾರ್ಥಿಗಳು ಪಿಯುಸಿಯವರು ಬರೆಯುವ ಸಾಮಾನ್ಯ ಎಸ್‌ಡಿಎ, ಎಫ್‌ಡಿಎ 2000 ಹುದ್ದೆಗೆ ಲಕ್ಷಗಟ್ಟಲೆ ಅರ್ಜಿ ಹಾಕುವರೆಂದರೆ ಶಿಕ್ಷಣದ ವ್ಯವಸ್ಥೆ ಎಷ್ಟು

ಹದಗೆಟ್ಟಿರಬೇಕು ಊಹಿಸಿ. ಈ ರೀತಿಯ ನಿರುದ್ಯೋಗದ ಕೂಪದಲ್ಲಿ ಬಿದ್ದು ಒದ್ದಾಡುತ್ತಿರುವ ಅದೆಷ್ಟು ಯುವಕ ಯುವತಿಯರ ಬಗ್ಗೆ ಚಿಂತಿಸದೆ ಇರುವದರಿಂದ ಇಂದು ಅವರು ಕೆಟ್ಟ ಮಾರ್ಗ ಹಿಡಿದು ತಂದೆ ತಾಯಿಗಳಿಗೆ, ಊರು ಕೇರಿಗೆ, ದೇಶಕ್ಕೆ ಮಾರಕವಾದ ದುಶ್ಕೃತ್ಯದಲ್ಲಿ ತೊಡಗಿಸಿಕೊಳ್ಳುತ್ತಿರುವುದು ಜ್ವಲಂತ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಯಾರೊಬ್ಬ ರಾಜಕಾರಣಿಗಳು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ ಏಕೆ?

ನಮ್ಮ ಪ್ರಜಾತಂತ್ರ ವ್ಯವಸ್ಥೆ ಇಷ್ಟ್ಯಾಕೆ ಅವನತಿಯತ್ತ ಸಾಗುತ್ತಿದೆ ಎಂಬುದನ್ನು ನೆನಪಿಸಿಕೊಂಡರೆ ಮುಂದಿನ ಭವ್ಯ ಭಾರತ ಅದೆಷ್ಟು ಭಯಾನಕ ಆಲೋಚನೆಗಳಿಗೆ, ಸಮಸ್ಯೆಗಳಿಗೆ ತುತ್ತಾಗುತ್ತದೆಯೋ ದೇವರೆ ಬಲ್ಲ. ಹೌದು, ಇಂದಿನ ದುರಾಡಳಿತದ ವ್ಯವಸ್ಥೆ ನೋಡಿದರೆ ಪ್ರಾರಂಭದಲ್ಲಿ ಹೇಳಿದ (ಬಡವರು ದುಡಿದ ದುಡ್ಡನ್ನು ಲಂಚರೂಪದಲ್ಲಿ ಕಸಿದುಕೊಂಡು ಪ್ರಜೆಗಳಿಗಾಗಿ ಚುನಾವಣೆಯಲ್ಲಿ ಒಂದು ಓಟಿಗೆ ಇಂತಷ್ಟು ಎಂದು ಒಂದಿಷ್ಟು ಕಾಸು ಕೊಟ್ಟು) ಪ್ರಜೆಗಳೇ ( ಭ್ರಷ್ಟರೆ) ಆಳುವ ಸರಕಾರ ಇದು ಇಂದಿನ ದಿನಕ್ಕೆ ಸರಿಯಾಗಿ ಹೊಂದುವ ಸಂವಿಧಾನದ ಘೋಷವಾಕ್ಯ ಎಂದರೆ ತಪ್ಪಾಗಲಾರದು ಎಂದು ಬೇಸರದ ಮನಸ್ಸಿನಿಂದ ಹೇಳಬೇಕಾಗಿದೆ. ಇಂಥವರಿಂದ ದೇಶದ ಪ್ರಗತಿ ಹೇಗೆ ಹೊಂದಲು ಸಾಧ್ಯ?

ಹಿಂದೊಮ್ಮೆ ಸ್ವಾಮಿ ವಿವೇಕಾನಂದರು ದೇಶದ ಅಭಿವೃದ್ಧಿ ಕುರಿತು ಮಾತನಾಡುವಾಗ ಪ್ರತಿಯೊಬ್ಬ ವ್ಯಕ್ತಿಗೂ ಇರುವಂತೆ ಪ್ರತಿಯೊಂದು ದೇಶಕ್ಕೂ ಒಂದು ಜೀವನೋದ್ದೇಶವಿದೆ ಅದೇ ಜೀವದ ಪರಮ ಸ್ವರ. ಉಳಿದ ಸ್ವರಗಳು ಅದರಲ್ಲಿ ಮಿಳಿತವಾಗಬೇಕು. ಇಂಗ್ಲೆಂಡಿನಲ್ಲಿ ರಾಜಕಾರಣವೇ ಜೀವಾಳ. ಮತ್ತೊಂದು ದೇಶದಲ್ಲಿ ಕಲಾ ಕೌಶಲ್ಯವೇ ಜೀವಾಳವಾಗಿರುತ್ತದೆ. ಬ್ರಿಟಿಷರಿಂದ ನಲುಗುತ್ತಿರುವ ಈ ಭಾರತಕ್ಕೆ ತನ್ನ ಮೂಲ ಧರ್ಮವನ್ನು ಉಳಿಸಿಕೊಳ್ಳುವುದು ಮತ್ತು ಅಭಿವೃದ್ಧಿ ಪಥದತ್ತ ಸಾಗುವುದೇ ಜೀವಾಳವಾಗಿದೆ. ಇದಕ್ಕಾಗಿ ಸತ್ಯನಿಷ್ಠ ಬದುಕು, ದೇಶವನ್ನು ಮುನ್ನಡೆಸುವವರ ಪ್ರಾಮಾಣಿಕ ಹೋರಾಟ, ಒಬ್ಬರಿಗೊಬ್ಬರು ದ್ವೇಷ, ಮತ್ಸರದಿಂದ ಕಾಣುವದನ್ನು ನಿಲ್ಲಿಸುವುದು ಈ ಮೂರು ಸೂತ್ರಗಳು ಭವ್ಯ ಭಾರತವನ್ನು ಸಮೃದ್ಧಗೊಳಿಸುತ್ತವೆ ಎಂದು ಹೇಳಿರುವುದನ್ನು ಇಂದಿನ ರಾಜಕಾರಣಿಗಳು ಅರಿವುದೊಳಿತು. ಇಂದು ಬ್ರಿಟಿಷರಿಲ್ಲ ಅವರಿಗಿಂತ ಒಂದು ಹೆಜ್ಜೆ ಮುಂದು ಎಂಬಂತೆ ಶೊಷಿಸುತ್ತಿರುವುದು ದುಃಖಕರ. ರೈತನ ಕೃಷಿಯೇ ದೇಶದ ಬೆನ್ನಲುಬು ಆಗಿರುವ ಈ ದೇಶದಲ್ಲಿ ಕೃಷಿಗೆ ಸಂಭಂದಿಸಿದ ಸರಿಯಾದ ಆರೋಗ್ಯಕರ ತಾರ್ಕಿಕ ಚರ್ಚೆ ನಡೆಯದೆ ಇರುವುದು ವಿಪರ್ಯಾಸ. ರೈತರಿಗೆ ಹಲವಾರು ಯೋಜನೆಗಳನ್ನೇನೊ ತಂದಿದ್ದಾರೆ, ಅದರೆ ಅದರ ನಿರ್ವಹಣೆಗೆ ಸಂಬಂಧಿಸಿದ ಮಾಹಿತಿ ನೀಡುವಲ್ಲಿ ಜನ ಸಾಮಾನ್ಯರನ್ನು ತಲುಪಿಸುವಲ್ಲಿ ಅಧಿಕಾರಿಗಳು ವಿಫಲರಾಗುತ್ತಿದ್ದಾರೆ. ರೈತನು ಬೆಳೆದ ಬೆಳೆಗೆ ದುಪ್ಪಟ್ಟು ಬೆಂಬಲ ಬೆಲೆಯನ್ನು ಮೊದಲನೆಯ ಹಂತದಲ್ಲಿ ಕೊಟ್ಟು ಬಿಟ್ಟರೆ ರೈತನಿಗೆ ಇನ್ಯಾವ ಸಾಲದ ಅವಶ್ಯಕತೆಯೆ ಇರುವುದಿಲ್ಲ. ಇದರಿಂದ ಅವನು ಉತ್ತೇಜನೆಗೆ ಇನ್ನಷ್ಟು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಶಿಕ್ಷಣ ಪಡೆದು ಸರಕಾರಿ ಹುದ್ದೆಯಿಂದ ವಂಚಿತರಾದ ನಿರುದ್ಯೋಗ ಇನ್ನಷ್ಟು ಯುವಕ – ಯುವತಿಯರು ಕೃಷಿಯಲ್ಲಿ ಭಾಗಿಯಾದರೆ ದೇಶದ ಅಭಿವೃದ್ಧಿ





ಖಂಡಿತ ನೂರ್ಮಡಿಗೊಳ್ಳುತ್ತದೆ. ವಿವೇಕಾನಂದರ ವಿಚಾರವನ್ನು ಇಲ್ಲಿ ನೋಡಬಹುದು 'ಅಮೆರಿಕವು ಮುಂದುವರೆದಿರುವುದು ಕೃಷಿಯ ಅಭಿವೃದ್ಧಿಯಿಂದಲೆ. ಅಂದರೆ ನಮ್ಮ ರೈತರು ಅವಿದ್ಯಾವಂತರಾಗಿಯೇ ಬೇಸಾಯಗಾರರಾಗಿರಬೇಕಿಲ್ಲ. ಅವರೂ ವಿದ್ಯಾವಂತರಾಬೇಕು. ಕೃಷಿ ಕ್ಷೇತ್ರದ ಅಧ್ಯಯನದಲ್ಲಿ ಪರಿಣತಿ ಪಡೆದು ವೈಜ್ಞಾನಿಕ ರೀತಿಗಳನ್ನು ಅಳವಡಿಸಿಕೊಳ್ಳಬೇಕು. ಈಗೇನೊ ಅವರು ಅಲ್ಪ ಸ್ವಲ್ಪ ಓದಿ ಬಿಡುತ್ತಾರೆ. ನಂತರ ನಗರದ ವಿಲಾಸಿ ಜೀವನ ಅವರ ಮೈಮರೆಸುತ್ತದೆ. ಹಾಗಾಗಿ ಯಾವುದೋ ವೃತ್ತಿಯನ್ನು ಕೈಗೊಂಡು ಬಿಡುತ್ತಾರೆ; ತಮ್ಮ ಪರಂಪರಾಗತ ಬೇಸಾಯವನ್ನು ತೊರೆದು ಬಿಡುತ್ತಾರೆ. ಈ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ಬಲ್ಲವರಿಂದ ರೈತರಿಗೆ ಅವಶ್ಯಕವಾಗಿ ಬೇಕಾಗುತ್ತದೆ. ವಿದ್ಯಾವಂತ ಯುವಕರು ಗ್ರಾಮಗಳಲ್ಲಿಯೇ ನೆಲೆಸಿದರೆ ಚೆನ್ನಾಗಿ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ. ವೈಜ್ಞಾನಿಕ ಕೃಷಿಯಿಂದ ಹೆಚ್ಚಿನ ಇಳುವರಿ ಸಾಧ್ಯ. ಅದರಿಂದ ರೈತರ ಕರ್ತವ್ಯ ಪಾಲನೆ ಜಾಗೃತಗೊಳ್ಳುತ್ತದೆ. ಅವರ ಬೌದ್ಧಿಕ ಬೆಳವಣಿಗೆಯು ಆಗುತ್ತದೆ. ತತ್ಪರಿಣಾಮವಾಗಿ ರಾಷ್ಟ್ರದ ಉದ್ಧಾರವೂ ಸಾಧಿತವಾಗುತ್ತದೆ. ರಾಷ್ಟ್ರದ ಉದ್ಧಾರವಾದರೆ ಸರ್ವ ಜನರಲ್ಲು ಸಮಾನತೆ ಸಾಧ್ಯವಾಗುತ್ತದೆ. ಇದು ಸಾಧ್ಯವಾಗುವುದು ವಿದ್ಯಾವಂತರು ಗ್ರಾಮೀಣ ಜನರಲ್ಲಿ ಸಾಮರಸ್ಯದಿಂದ ಬೆರೆತಾಗ ಮಾತ್ರ. ಆಗ ಮೇಲು ಕೀಳುಗಳು ತಮ್ಮಷ್ಟಕ್ಕೇ ಮಾಯವಾಗುತ್ತವೆ. ಈ ಕ್ರಮದಿಂದ ನಾವು ಸಾವಿರ ವರ್ಷಗಳಲ್ಲಿ ಸಾಧಿಸಬಹುದಾದುದನ್ನು ಹತ್ತೇ ವರ್ಷಗಳಲ್ಲಿ ಸಾಧಿಸಿ ಬಿಡಬಹುದು'. ಹೀಗೆ ಸ್ವಾಮಿಜಿಯವರು ಭವ್ಯ ಭಾರತದ ಭವಿಷ್ಯವನ್ನು ಕಂಡಿರಿಸಿದ್ದುಂಟು.

ಹೀಗೆ ಅನೇಕ ಮಹಾತ್ಮರ ಉಕ್ತಿಗಳ ಮೇಲೆ ಗುರು ಬಸವಾದಿ ಪ್ರಮಥರ ವಚನಗಳ ಸಾರದೊಂದಿಗೆ ಹಲವಾರು ಅಭಿವೃದ್ಧಿಯ ಯೋಜನೆಗೆ ಸರಿಯಾದ ಚರ್ಚೆಯನ್ನು ಮಾಡಿ ಸಮರ್ಪಕ ಉತ್ತರವನ್ನು ಪಕ್ಷ ಬೇದ ಮರೆತು ಅನುಭವ ಮಂಟಪದ ಮಾದರಿಯಂತೆ ಕಂಡುಕೊಂಡು ಜನಸಾಮಾನ್ಯರ ಬದುಕಿಗೆ ದಾರಿದೀಪವಾಗುವಂತಹ ಯೋಜನೆಗಳು ಸಾಕಾರವಾದರೆ ಇಂದಿಗೂ ರಾಜಕೀಯಕ್ಕೆ ಭವಿಷ್ಯವಿದೆ. ಇನ್ನಾದರೂ ಕೀಳು ರಾಜಕೀಯ ಮಾಡುತ್ತ ಸ್ವಾರ್ಥ, ವಂಚನೆಯಿಂದ ಚರ್ಚೆಗಳು ಗೊಂದಲದ ಗೂಡಾಗಿ ಪ್ರಜಾತಂತ್ರದ ವ್ಯವಸ್ಥೆಗೆ ಧಕ್ಕೆ ಬರದಂತೆ ನಮ್ಮ ರಾಜಕೀಯ ನೇತಾರರು ಆರೋಗ್ಯಕರ ಚರ್ಚೆಗಳನ್ನು ಅಧಿವೇಶನಗಳಲ್ಲಿ ನಡೆಸುತ್ತಾರೆಯೇ ಕಾದು ನೋಡಬೇಕು. ಅದು ನಮ್ಮ ಹಣೆಬರಹ.

ಹೀಗೆ ಹಲವಾರು ಅಭವೃದ್ಧಿಯ ಯೋಜನೆಗೆ ಸರಿಯಾದ ಚರ್ಚೆಯನ್ನು ಮಾಡಿ ಭವ್ಯ ಭಾರತವನ್ನು ಅಭಿವೃದ್ಧಿಯ ಪಥದೆಡೆಗೆ ಕೊಂಡೊಯ್ಯುವ ಬದಲು ಕ್ಷುಲ್ಲಕ ರಾಜಕಾರಣ ಮಾಡುತ್ತ ಕಾಲಹರಣ ಮಾಡುವುದನ್ನು ಬಿಡಬೇಕು. ಎ.ಕೆ.ಆಂಟನಿ, ಮಾಣಿಕ ಸರಕಾರ, ಆದರ್ಶ ಮಾರ್ಗವನ್ನು ಆರೋಗ್ಯಕರ ಚರ್ಚಿಸಿ ಅವರ ಕೈಬಲ ಪಡಿಸಿ ಅಭವೃದ್ಧಿ ಪಡಿಸಿಕೊಳ್ಳುವ ಜವಾಬ್ದಾರಿ ನಮ್ಮದು ಏನಂತೀರಿ?

**– ಪೂಜ್ಯ ಶ್ರೀ ಸದ್ಗುರು ಬಸವಪ್ರಭು ಸ್ವಾಮೀಜಿ**
ಬಸವ ಧರ್ಮ ಪೀಠ, ಬಸವ ಮಹಾಮನೆ,
ಬಸವಕಲ್ಯಾಣ

# ಮನದ ಚಂಚಲತೆ ಮತ್ತು ನಿಯಂತ್ರಣ

ಲೋಕದ ಚೇಷ್ಟೆಗೆ ರವಿಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ ಎನಗುಳ್ಳುದೊಂದು ಮನ. ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ ಇನ್ನೆನಗೆ ಭವವುಂಟೆ ಚನ್ನಮಲ್ಲಿಕಾರ್ಜುನ? ಎಂದು ಕನ್ನಡದ ಪ್ರಥಮ ಕವಿಯತ್ರಿ, ವೀರ ವೈರಾಗ್ಯನಿಧಿ ಅಕ್ಕಮಹಾದೇವಿಯವರು ಹೇಳುವಂತೆ; ಈ ಜಗತ್ತಿನ ಎಲ್ಲ ಚಟುವಟಿಕೆಗಳಿಗೆ ಮೂಲ ಕಾರಣ ಸೂರ್ಯ. ಅವನೇ ಎಲ್ಲ ಚೇಷ್ಟೆಗೂ ಬೀಜವಾಗಿದ್ದಾನೆ. ಸೂರ್ಯೋದಯವಾಗುವ ಹೊತ್ತಿಗೆ ಕೋಳಿ ಕೂಗಲಾರಂಭಿಸುತ್ತದೆ. ಕಾಡ ನವಿಲು ಒದರಲು ಆರಂಭಿಸುತ್ತವೆ, ಹೂವುಗಳು ಸಹಜವಾಗಿ ಅರಳಿ ಬಿಡುತ್ತವೆ, ದುಂಬಿಗಳು ಹೂವಿಂದ ಹೂವಿಗೆ ಹಾರಿ ಬಂಡನು ಸವಿಯಲು ಶುರು ಮಾಡುತ್ತವೆ. ರೈತರು ಮುಂಜಾವಿನಲ್ಲಿ ಎದ್ದು ಹೊಲ-ಗದ್ದೆಗಳಿಗೆ ಹೋಗಿ ತಮ್ಮ ಕೃಷಿ ಕಾಯಕ ಆರಂಭಿಸುತ್ತಾರೆ. ವ್ಯಾಪಾರ ವ್ಯವಹಾರ, ಸರಕಾರಿ ಸೇವೆಯಲ್ಲಿದ್ದವರು ಎಲ್ಲರೂ ಎದ್ದು ತಮ್ಮ ತಮ್ಮ ದಿನನಿತ್ಯದ ಕ್ರಿಯೆಗಳನ್ನು ಮುಗಿಸಿಕೊಂಡು ಕಾಯಕಕ್ಕೆ ಹೊರಡುವುದು ಸೂರ್ಯೋದಯದ ನಂತರವೆ.

ಮನುಷ್ಯನಿಗೆ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎಂದು ಎರಡು ಪ್ರಕಾರದ ಕರಣಗಳು ಹಾಗೂ ಮನ, ಬುದ್ಧಿ ಚಿತ್ತ, ಅಹಂಕಾರ ಎಂಬ ನಾಲ್ಕು ಅಂತಃಕರಣಗಳಿವೆ. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಇವು ಪಂಚಜ್ಞಾನೇಂದ್ರಿಯಗಳು. ವಾಕ್, ಪಾದ, ಪಾಣಿ, ಗುದ ಮತ್ತು ಗುಹ್ಯ ಎಂಬ ಐದು ಕರ್ಮೇಂದ್ರಿಯಗಳು.

ಒಂದೊಂದು ಜ್ಞಾನೇಂದ್ರಿಗಳು ಒಂದೊಂದು ವಿಷಯವನ್ನು ಗ್ರಹಿಸುತ್ತವೆ. ಕಣ್ಣು ರೂಪವನ್ನು, ಕಿವಿಯು ಶಬ್ದವನ್ನು, ಮೂಗು ಗಂಧ ಅಥವಾ ವಾಸನೆಯನ್ನು ನಾಲಿಗೆ ಅಥವಾ ಜಿಹ್ವೆಯು ರಸವನ್ನು ಹಾಗೂ ಚರ್ಮವು ಶೀತೋಷ್ಣವನ್ನು ಗ್ರಹಿಸುತ್ತದೆ.

ಸೃಷ್ಟಿಕರ್ತನಾದ ಲಿಂಗದೇವನು ಎಲ್ಲ ಇಂದ್ರಿಯಗಳಿಗೆ ತಲಾ ಒಂದೊಂದು ಕಾಯಕವನ್ನು ನೀಡಿದ್ದಾನೆ. ಆದರೆ ನಾಲಿಗೆಗೆ ಮಾತ್ರ ಎರಡು ಖಾತೆಗಳನ್ನು ಕೊಟ್ಟಿದ್ದಾನೆ. ಒಂದು ರಸ ಅಥವಾ ಹುಳಿ, ಖಾರ, ಉಪ್ಪು ಮುಂತಾದ ನವರಸಗಳನ್ನು ಗ್ರಹಿಸುವುದು ಮತ್ತು ಮಾತನಾಡುವುದು. ಜಗತ್ತಿನ ಎಲ್ಲ ಮಾನವರ ಬಹುತೇಕ ಸಮಸ್ಯೆಗಳಿಗೆ ನಾಲಿಗೆಯೇ ಕಾರಣವಾಗಿದೆ. ಏನೇನೋ ಮಾತಾಡುವುದರಿಂದ ಜಗಳ ಬರುತ್ತದೆ. ಏನೇನಾದರೂ ಊಟ ಮಾಡುವುದರಿಂದ ರೋಗ ಬರುತ್ತದೆ. ಈ ಕುರಿತು ಕನ್ನಡದಲ್ಲಿ ಒಂದು ಪ್ರಸಿದ್ಧ ಗಾದೆ ಮಾತಿದೆ. ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ. ಸಮತೋಲನವಾದ ಆಹಾರವನ್ನು ಇತಿಮಿತಿಯಾಗಿ ತೆಗೆದುಕೊಂಡು ಹಿತ ಬುಕ್, ಮಿತ ಬುಕ್ ಎಂಬಂತೆ ಕಾಲ-ಋತುವಿಗನುಗುಣವಾಗಿ ಆಹಾರ ಸೇವನೆ ಮಾಡಿದರೆ, ರೋಗ ಬರುವುದನ್ನು ತಡೆಯಬಹುದು.

ಅದೇ ರೀತಿ, ಹಿತವಾಗಿ, ಮಿತವಾಗಿ, ಅವಶ್ಯಕತೆ ಇರುವಷ್ಟನ್ನು ಮಾತ್ರ ಪ್ರೀತಿ-ವಿಶ್ವಾಸದ ಮಾತುಗಳನ್ನಾಡಿದರೆ ಜಗಳ ವಾದ-ವಿವಾದ ಆಗುವ ಪ್ರಶ್ನೆಯೇ ಇಲ್ಲ. ಮಾತು ಬೆಳ್ಳಿ ಮೌನ ಬಂಗಾರ ಎನ್ನುತ್ತಾರೆ. ಅನವಶ್ಯಕವಾಗಿ ಮಾತನಾಡುವುದಕ್ಕಿಂತ ಮೌನವಾಗಿರುವುದು ಲೇಸು. ಅದಕ್ಕಾಗಿ ಮೌನವೇ ಬಂಗಾರ ಎಂದಿದ್ದಾರೆ. ಆದರೆ ಮಾತು ಮುತ್ತಾದರೆ, ನುಡಿಯು ಮುತ್ತಿನ ಹಾರವಾದರೆ, ಮಾಣಿಕ್ಯದ ದೀಪ್ತಿಯಾದರೆ, ನಮ್ಮ ನುಡಿಯು ಸ್ಫಟಿಕದ ಸಲಾಕೆಯಂತಾದರೆ ಆ ನುಡಿಯನ್ನು ಲಿಂಗದೇವ ಮೆಚ್ಚಿ ಅಹುದಹುದು ಎನ್ನುತ್ತಾನೆ. ಆ ಮಾತು ಜ್ಯೋತಿರ್ಲಿಂಗವಾಗುವುದು. ಮತ್ತೊಬ್ಬರ ಮನದ ಅಜ್ಞಾನದ ಕತ್ತಲೆಯನ್ನು ಕಳೆಯುವುದು. ಅದಕ್ಕಾಗಿ ಸರ್ವಜ್ಞಕವಿ ಹೀಗೆ ಹೇಳಿದ್ದಾರೆ.





**ಮಾತಿನಿಂದಲೆ ಇಹವು । ಮಾತಿನಿಂದಲೆ ಪರವು ।**
**ಮಾತಿನಿಂದಲೆ ಸಕಲ ಸಂಪದವು। ಜಗದೊಳಗೆ**
**ಮಾತೇ ಮಾಣಿಕ್ಯವು ಸರ್ವಜ್ಞ।**

ಕ್ರಾಂತಿಕವಿ ಸರ್ವಜ್ಞ ಹೇಳುವಂತೆ; ಮಾತಿನಿಂದಲೆ ಹಗೆ, ಕೊಲೆ, ಮಾತಿನಿಂದಲೆ ಪ್ರೀತಿ, ವಿಶ್ವಾಸ ಎಲ್ಲದಕ್ಕೂ ಮಾತೆ ಕಾರಣವಾಗಬಲ್ಲದು. ನಾಲಿಗೆಯು ನಮ್ಮ ವಿವೇಕದ ಒರೆಯಲ್ಲಿದ್ದು, ನಮ್ಮ ಹತೋಟಿಯಲ್ಲಿದ್ದರೆ ನಾವು ಏನನ್ನು ಬೇಕಾದರೂ ಸಾಧಿಸಬಹುದು, ಪಡೆಯಬಹುದು. ನಾಲಿಗೆಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳದವನು ಯಾವ ಸಾಧನೆಯನ್ನೂ ಮಾಡಲಾರ.

ಜ್ಞಾನೇಂದ್ರಿಯಗಳೆಂದರೆ, ಜ್ಞಾನ-ಪ್ರಜ್ಞೆ ಇರುವಂಥ ಅರಿವು ಮಾಡುವಂಥ ಇಂದ್ರಿಯಗಳು. ಕರ್ಮೇಂದ್ರಿಯವೆಂದರೆ ಕೇವಲ ಕೆಲಸ ಮಾಡುವ ಇಂದ್ರಿಯಗಳು. ವಾಕ್ ಅಂದರೆ ನಾಲಿಗೆ, ಹಲ್ಲು, ವಸಡು, ಕಿರು ನಾಲಿಗೆ ಇವೆಲ್ಲವನ್ನು ಒಳಗೊಂಡ ಬಾಯಿ ಇದ್ದಾಗಲೆ ಮಾತನಾಡಲು ಸಾಧ್ಯವಾಗುವುದು. ಪಾದ ಅಂದರೆ ಕಾಲು, ಪಾಣಿ ಅಂದರೆ ಕೈ ಸೂಕ್ಷ್ಮಾಂಗಗಳಾದ ಗುದ ಮತ್ತು ಗುಹ್ಯ ಇವು ನಿರಂತರವಾಗಿ ಕಾರ್ಯ ಮಾಡುವ ಇಂದ್ರಿಯಗಳು.

**ಎಣ್ಣೆ ಬೇರೆ ಬತ್ತಿ ಬೇರೆ**
**ಎರಡೂ ಸೇರಿ ಸೊಡರಾಯಿತ್ತು**
**ಪುಣ್ಯ ಬೇರೆ, ಪಾಪ ಬೇರೆ**
**ಎರಡೂ ಕೂಡಿ ಒಡಲಾಯಿತ್ತು**

ಎಂಬಂತೆ ಪುಣ್ಯ-ಪಾಪಗಳ ಮಿಶ್ರಣದಿಂದಾಗಿಯೇ ನಾವು ಹುಟ್ಟು-ಸಾವುಗಳ ಭವಬಂಧನಕ್ಕೆ ಒಳಗಾಗಿದ್ದೇವೆ. 84 ಲಕ್ಷ ಜೀವಿರಾಶಿಗಳನ್ನು ಮತ್ತು ಈ ಬ್ರಹ್ಮಾಂಡದ ನಿರ್ಮಾತೃ ಲಿಂಗದೇವ ಪರಮಾತ್ಮನ ಅಂಶವೇ ನಮ್ಮೊಳಗಿರುವ ಆತ್ಮ. ಈ ಪಿಂಡಾಂಡಗತ ಚೈತನ್ಯಕ್ಕೆ ಜೀವಾತ್ಮ ಎನ್ನುತ್ತೇವೆ. ಜೀವಾತ್ಮನಿಗೆ ಯಾವತ್ತೂ ಪರಮಾತ್ಮನಲ್ಲಿ ಸೇರಬೇಕೆಂಬ ಹಂಬಲವೇ ಇರುತ್ತದೆ. ಆದರೆ ವಿರೋಧ ಪಕ್ಷದ ನಾಯಕನಂತೆ ಜೀವಾತ್ಮನ ಆಶಯಕ್ಕೆ ವ್ಯತಿರಿಕ್ತವಾಗಿ ಸದಾ ಕೆಳಮುಖವಾಗಿ ಹರಿಯುವ ಮತ್ತು ನಕಾರಾತ್ಮಕವಾಗಿ ಚಿಂತನೆ ಮಾಡುವುದು; ಸಂಕಲ್ಪ-ವಿಕಲ್ಪ ಮಾಡುವುದೆ ಮನಸ್ಸು. ಮನಸ್ಸಿನಲ್ಲಿ ನಾಲ್ಕು ವಿಭಾಗಗಳಿವೆ. ಮನ, ಬುದ್ಧಿ, ಚಿತ್ತ ಮತ್ತು ಅಹಂಕಾರ.

ಸಂಕಲ್ಪ-ವಿಕಲ್ಪ ಮಾಡುವುದೆ ಮನಸ್ಸು. ಇದೇ ಸರಿ, ಹೀಗೆ ಇರಬೇಕು ಎಂದು ಸ್ಪಷ್ಟವಾಗಿ ನಿರ್ಧರಿಸುವುದು ಬುದ್ಧಿ. ಬುದ್ಧಿಯಲ್ಲಿ ಮತ್ತೆ ಪ್ರಕಾರಗಳನ್ನು ಗುರುತಿಸಬಹುದು. 1) ನಿರ್ಬುದ್ಧಿ 2) ದುರ್ಬುದ್ಧಿ ಮತ್ತು 3) ಸುಬುದ್ಧಿ. ಚಿತ್ತ ಎಂದರೆ ಸಂಗ್ರಹ ಕೋಣೆ (Store Room) ಇದ್ದಂತೆ. ಕಣ್ಣು ಎಂಬ ಕ್ಯಾಮರಾದಿಂದ ತೆಗೆದ ದೃಶ್ಯದ ನೆಗೆಟಿವ್ ಪ್ರತಿ ಹಾಗೂ ಕಿವಿಯಿಂದ ಕೇಳಿಸಿಕೊಂಡ ಆಡಿಯೋ ಟೇಪ್‌ಗಳನ್ನು ಮತ್ತು ನೆನಪಿನ ಮಾಸ್ಟರ್ ಕಾಪಿಗಳನ್ನು ಸಹ ಚಿತ್ತದಲ್ಲಿ ಸಂಗ್ರಹಿಸಿ ಇಡಲ್ಪಡುತ್ತವೆ. ಕೆಟ್ಟ ಅಭಿರುಚಿ, ಕೀಳು ಭಾವನೆ, ದುರಾಸೆಯನ್ನು ಹೊಂದಿರುವ ಮನಸ್ಸು ಕೇವಲ ಕೆಟ್ಟ ದೃಶ್ಯ, ಕೆಟ್ಟ ಮಾತು, ನಿಷ್ಪ್ರಯೋಜಕ ವಿಷಯ ವಸ್ತುಗಳನ್ನೇ ಸಂಗ್ರಹಿಸಿಟ್ಟುಕೊಂಡಿರುತ್ತದೆ. ಅದಕ್ಕಾಗಿಯೇ ಗುರು ಬಸವಣ್ಣನವರು ಅಂಥ ಚಿತ್ತವನ್ನ ಅತ್ತಿಯ ಹಣ್ಣು ನೋಡಯ್ಯ, ವಿಚಾರಿಸಿದರೇನೂ ಹುರುಳಿಲ್ಲವಯ್ಯ ಎಂದಿದ್ದಾರೆ. ನಾನು, ನನ್ನದು, ನನ್ನಿಂದ ಎಂದು ಗರ್ವ ಪಡುವುದೆ ಅಹಂಕಾರ.

ಮನಸ್ಸು ಕಣ್ಣಿಗೆ ಕಾಣದ ಒಂದು ನಿರಾಕಾರ ಶಕ್ತಿ. ಮನುಷ್ಯನು ಮೂರು ಪ್ರಕಾರದ ಶರೀರಗಳನ್ನು ಹೊಂದಿರುತ್ತಾನೆ. ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರ. ಇವನ್ನು ತನುತ್ರಯ ಅಥವಾ ಶರೀರತ್ರಯವೆಂದೂ ಹೇಳಲಾಗುತ್ತದೆ. ಕೈ, ಕಾಲು, ಮುಖ ಮುಂತಾದ ಇಂದ್ರಿಯಗಳನ್ನು ಹೊಂದಿರುವ ಮೃಣ್ಮಯ ದೇಹವು ಸ್ಥೂಲ ಶರೀರವಾದರೆ, ಎಲ್ಲ ಇಂದ್ರಿಯಗಳ ಚೇಷ್ಟೆಗೆ ಕಾರಣವಾದ ಮನಸ್ಸೆ ಸೂಕ್ಷ್ಮ ಶರೀರ. ಮನಸ್ಸಿಗಿಂತಲೂ ಅತೀ ಸೂಕ್ಷ್ಮವಾದ ಅಂಗವೆ ಭಾವ. ತನು ಶುದ್ಧ ಮಾಡಿಕೊಳ್ಳುವುದು ಸುಲಭ. ಶರಣರ ಸಂಗ ಹಾಗೂ ಮಹಾನುಭಾವಿಗಳ ಅನುಭಾವದಿಂದ ಮನದ ಮೈಲಿಗೆಯನ್ನು ತೊಳೆದು ಶುದ್ಧಗೊಳಿಸಬಹುದು. ಆದರೆ ಆತ್ಮನ ಸುತ್ತ ಲೇಪವಾಗಿರುವ ಸೂಕ್ಷ್ಮಾತಿ ಸೂಕ್ಷ್ಮವಾದ ಪದರು ಭಾವ. ಭಾವ ಶುದ್ಧಿ ಮಾಡುವುದು ಮಾತ್ರ ಕಷ್ಟಕರವಾದದ್ದು. ತನು, ಇಂದ್ರಿಯ, ಮನ ಹಾಗೂ ಭಾವ ಶುದ್ಧಿಯಾದ ಬಳಿಕ ಮಾನವನೆ ಮಹಾದೇವ ಸ್ವರೂಪನಾಗುತ್ತಾನೆ.

ಮನಸ್ಸಿನಲ್ಲಿ ಅದ್ಭುತವಾದ ಶಕ್ತಿಯಿದೆ. ಅದನ್ನು ಪಳಗಿಸಿ ನಮ್ಮ ಹಿಡಿತದಲ್ಲಿಟ್ಟುಕೊಂಡರೆ, ಅಸಾಧ್ಯವಾದುದನ್ನು ಸಾಧಿಸಬಹುದು. ಅಭೇದ್ಯವಾದುದನ್ನು ಭೇದಿಸಬಹುದಾಗಿದೆ. ಮಾನವನ ಜಯ-ಅಪಜಯ, ವಾಮ-ಕ್ಷೇಮ, ಹಾನಿ-ವೃದ್ಧಿ, ಮಾನ-ಅಪಮಾನ, ಗುರಿ ಮುಟ್ಟುವಿಕೆ. ಹಿಂಬರಿಕೆ ಇವೆಲ್ಲವೂ ಮನಸ್ಸಿನ ನಿಯಂತ್ರಣದ ಮೇಲೆಯೇ ಅವಲಂಬನೆಯಾಗಿರುತ್ತವೆ. ಮನಸ್ಸನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡವನು ಮಾತ್ರ ತಾನು ಇಟ್ಟುಕೊಂಡ ಗುರಿ ಮುಟ್ಟಬಲ್ಲ. ಸಾಧನೆಯ ಶಿಖರ ಏರಬಲ್ಲ. ಶ್ರೇಷ್ಠ ಸಾಧಕನಾಗಬಲ್ಲ. ಮನಸ್ಸಿನ ಗುಲಾಮನಾದವನು ಮಾತ್ರ ಕೊನೆಯ ವರೆಗೂ ಗುಲಾಮನಾಗಿಯೇ ಉಳಿಯುವನು. ರಾಮಾಯಣ, ಮಹಾಭಾರತದ ಯುದ್ಧಗಳು ನಡೆದಿರುವುದೂ ಮನಸ್ಸಿನ ಗುಲಾಮರಾದವರಿಂದಲೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಮನೆಗೆ ಬೀಗ ಹಾಕುತ್ತೇವೆ, ಬೀಗ ತೆಗೆಯಲು ಮತ್ತು ಲಾಕ್ ಮಾಡಲು ಪ್ರತ್ಯೇಕ ಕೀಲಿ ಕೈಯಿರುವುದಿಲ್ಲ. ಒಂದೇ ಕೀಲಿಕೈಯಿಂದ ಪ್ರತ್ಯೇಕ ಮುಚ್ಚಬಹುದು ; ಅಂದರಿಂದಲೇ ತೆರೆಯಲೂಬಹುದು. ಎಡಕ್ಕೆ ತಿರುವಿದಾಗ ಲಾಕ್ ಆಗುತ್ತದೆ. ಬಲಕ್ಕೆ ತಿರುವಿದಾಗ ತೆರೆದುಕೊಳ್ಳುತ್ತದೆ.

ಅದೇ ರೀತಿಯಾಗಿ ಮನುಷ್ಯನ ಬಂಧನ ಮತ್ತು ಮುಕ್ತಿ ಎರಡಕ್ಕೂ ಮನಸ್ಸೆ ಕಾರಣ. ಅದು ಯಾವಾಗಲೂ ಅಧೋಮುಖವಾಗಿ ಹರಿಯುತ್ತದೆ. ಮನಸ್ಸು, ಹೆಣ್ಣು, ಹೊನ್ನು, ಮಣ್ಣುಗಳಿಗಾಗಿ ಆಶೆ ಮಾಡಿದರೆ ನಾವು ಭವ ಬಂಧನಕ್ಕೆ ಒಳಗಾಗುತ್ತೇವೆ. ದೇವರು ಧರ್ಮದ ಕಡೆ ಮುಖ ಮಾಡಿ, ಪೂಜೆ-ಧ್ಯಾನ-ಸಮಾಜ ಸೇವೆಯನ್ನು ಮಾಡಿದಾಗ ಬಂಧನದಿಂದ ಬಿಡುಗಡೆಯಾಗುತ್ತದೆ.

ದೇವರು ಈ ಅದ್ಭುತವಾದ ಸೃಷ್ಟಿಯ ಜತೆಗೆ 84 ಲಕ್ಷ ಜೀವರಾಶಿಯನ್ನು ನಿರ್ಮಿಸಿದ್ದಾನೆ. ಇದರಲ್ಲಿ ಎಲ್ಲಕ್ಕಿಂತ ಶ್ರೇಷ್ಠ ಜನ್ಮ ಮಾನವ ಜನ್ಮ. ಮಾನವರು ಹುಟ್ಟಿ ಬಂದಿದ್ದು ಇದೇ ಮೊದಲ ಬಾರಿಯಲ್ಲ. ಮಾನವ ಜನ್ಮದಲ್ಲಿಯೇ ಲಕ್ಷಾಂತರ ಸಲ ಹುಟ್ಟಿ ಸತ್ತು ಮತ್ತೆ ಹುಟ್ಟಿ ಹೀಗೆ ಪುನರ್‌ಜನ್ಮ ಪಡೆಯುತ್ತ ಪುನರಪಿ ಜನನಂ ಪುನರಪಿ ಮರಣಂ ಎಂಬಂತೆ ಭವಚಕ್ರದಲ್ಲಿ ಸಿಕ್ಕು ಜೀವಾತ್ಮ ಒದ್ದಾಡುತ್ತದೆ. ಈ ಹುಟ್ಟು-ಸಾವುಗಳಿಗೆ ಕಾರಣವಾಗಿರುವುದೇ ಮನಸ್ಸು. ಮನಸ್ಸಿನ ದೌರ್ಬಲ್ಯಗಳನ್ನು ಕಳೆದುಕೊಂಡು ಸಂಪೂರ್ಣವಾಗಿ ದೈವೀ ವಾತಾವರಣದಲ್ಲಿ ಬೆಳೆದು ಗುರುವಿನ ಅನುಗ್ರಹ ಹೊಂದಿ ಶರಣರಾದಾಗ ಮಾತ್ರ ಭವಬಂಧನದಿಂದ ಬಿಡುಗಡೆ ಹೊಂದಲು ಸಾಧ್ಯವಾಗುತ್ತದೆ.





# ಪೂಜ್ಯ ಮಾತಾಜಿಯವರ 71ನೇ ವರ್ಧಂತಿಯಂದು ಅರ್ಪಿಸಿದ ನುಡಿಕಾಣಿಕೆ



ದೇವ ನೀಡಲಿ ನೂರು ವರುಷ
ಹತ್ತೊಂಭತ್ನೂರ ನಲ್ವತ್ತಾರನೇ ವರುಷ
ಮಾರ್ಚ್ ತಿಂಗಳ ಹದಿಮೂರನೇ ದಿವಸ
ಚಿತ್ರದುರ್ಗದ ಸಾಸಲಹಟ್ಟಿ ಚಿಕ್ಕ ಊರು
ಖ್ಯಾತವಾಯ್ತು ಮಾತೆ ಜನಿಸಿ ಆ ಊರು॥ 1 ॥

ಅಪ್ಪ ಡಾಕ್ಟರ್ ಬಸಪ್ಪನವರು
ಅವ್ವ ಗಂಗಮ್ಮ ಧರ್ಮನಿರತರು
ಮನೆಗೆ ಬೆಳಕಾಗಲಿ ಎಂದು ಅವರು
ಮಗಳಿಗೆ ಇಟ್ಟರು ರತ್ನಳೆಂದು ಹೆಸರು॥ 2 ॥

ಓದಿನಲ್ಲಿ ರತ್ನಮ್ಮ ಸದಾ ಮುಂದು ಮುಂದು
ಪ್ರಗತಿಯ ಕಂಡು ಹೆಮ್ಮೆ ಆಯ್ತು ಮನೆಗೆ ಅಂದು
ವಿರಕ್ತಿ ಬಯಸಿದ ಮಗಳು ಮನೆ ಬಿಡಲು
ಕುದಿದು ನೊಂದಿತು ಯಾಯಿಯ ಒಡಲು॥ 3 ॥

ತಾಯಿಯ ಕಣ್ಣೀರು ಅವರ ತಡೆಯಲಿಲ್ಲ
ಜನರ ನಿಂದೆಗೆ ಧೃತಿಗೆಡಲೇ ಇಲ್ಲ
ಕಷ್ಟ ಕಾರ್ಪಣ್ಯಕ್ಕೆಂದೂ ಕುಂದಲಿಲ್ಲ
ದಿಟ್ಟ ಹೆಜ್ಜೆ ಇಟ್ಟ ಮಾತೆ ಮಧ್ಯ ನಿಲ್ಲಲಿಲ್ಲ॥ 4 ॥

ಗುರು ಲಿಂಗಾನಂದರಿಂದ ಹೊಂದಿ ದೀಕ್ಷೆ
ಅಕ್ಕನ ಆದರ್ಶವೇ ಆಯಿತು ಶ್ರೀರಕ್ಷೆ
ನಿತ್ಯ ಸತ್ಯ ಬಸವಪಥದ ನೀಲನಕ್ಷೆ
ಹಿಡಿದು ನಡೆದಿಹರು ಮಾತೆ ಎತ್ತರೆತ್ತರಕೆ॥ 5 ॥

ಮನೆಯ ರತ್ನ ಜಗಕ್ಕಾಯ್ತು ಅನರ್ಘ್ಯರತ್ನ
ಪ್ರವಚನದಿ ಹರಿವ ಮಾತು ಮಹಾನದಿ
ರಚಿಸಿಹರು ಗ್ರಂಥಗಳ ಮಹಾನಿಧಿ
ಲಿಂಗಾಯತಕೆ ಮಾತೆಯಾದರು ಅಮೂಲ್ಯನಿಧಿ॥ 6 ॥

ಮೊದಲ ಮಹಿಳಾ ಜಗದ್ಗುರುಗಳಾಗಿ
ಬಸವ ಪೀಠದ ಮಹಾಜಗದ್ಗುರುವಾಗಿ
ಶರಣ ಮೇಳ, ಕಲ್ಯಾಣ ಪರ್ವದ ರೂಹಾರಿಗಳಾಗಿ
ಸಮಾಜಕ್ಕಾಗಿ ಅಹರ್ನಿಶ ದುಡಿವ ಮಹಾತ್ಯಾಗಿ॥ 7 ॥

ಬಸವ ಧರ್ಮ ಪ್ರಚಾರಕೆ ಎಲ್ಲೆ ಇಲ್ಲ
ವಿವಿಧ ಭಾಷೆ ದೇಶ ದೇಶಗಳಲ್ಲೆಲ್ಲ
ಬಸವ ತತ್ವ ಪ್ರಸ್ತುತ ಜನರಿಗೆ ಎಲ್ಲ
ಸಾರಿದಿರಿ ಮಾತೆ ತಾವು ಹೋದಲೆಲ್ಲ॥ 8 ॥

ಬಸವ ಪೀಠದಿಂದ ಕೂಡಲ ಸಂಗಮ
ಬಸವ ಮೂರ್ತಿಗಾಗಿ ಬಸವ ಕಲ್ಯಾಣ
ಲಿಂಗಾಯತ ಧರ್ಮ ಸ್ವತಂತ್ರ ಧರ್ಮವು
ಖ್ಯಾತಿ ಪಡಿಸಿದಿರಿ ಮಾತೆ ತಾವು॥ 9 ॥

ಬಸವ ಶಕೆ ಎಂಟ್ನೂರ ಎಂಭತ್ತೆರೆಡು ವರುಷ
ಮಾರ್ಚ್ ತಿಂಗಳ ಹದಿಮೂರನೇ ದಿವಸ
ಮಾತಾಜಿ ಪಾದಾರ್ಪಣೆಯ ಎಪ್ಪತ್ತೊಂದನೇ ವರುಷ
ದೇವ ನೀಡಲವರಿಗೆ ನೂರಾರು ವರುಷ

– ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ

# ಶರಣರಲ್ಲಿ ವೈಜ್ಞಾನಿಕ ಅರಿವು ಮತ್ತು ವಿಶಾಲ ದೃಷ್ಟಿಕೋನ

## 1. ಭೂಗೋಳ (Geology)

ಶರಣರಲ್ಲಿ ವೈಜ್ಞಾನಿಕ ದೃಷ್ಟಿಕೋನ ಬಹಳ ವಿಶಾಲವಾಗಿತ್ತು, ಅಲ್ಲದೆ ದೂರದೃಷ್ಟಿ ಉಳ್ಳವರಾಗಿದ್ದರು. ಆದ್ದರಿಂದಲೇ ಶರಣರನ್ನು ದಾರ್ಶನಿಕರು ಎಂದು ಪರಿಗಣಿಸಲಾಗಿದೆ. ಇವರಲ್ಲಿ ಖಗೋಳ ಚಲನೆ, ಭೂಗೋಳ (Geology) ಜ್ಞಾನವು ಅಪಾರವಾಗಿತ್ತು. ಭೌಗೋಳಿಕವಾಗಿ 'ಜಂಬೂದ್ವೀಪ' ಸೇರಿದಂತೆ ಸಪ್ತದ್ವೀಪಗಳ ಬಗ್ಗೆ ಮತ್ತು 'ನವಖಂಡಗಳ' ಬಗ್ಗೆ ಬಲ್ಲವರಾಗಿದ್ದರು. ಈ ಕುರಿತಾದ ಉಲ್ಲೇಖವಿರುವ ಧರ್ಮಪಿತ ಅಪ್ಪ ಬಸವಣ್ಣನವರ ವಚನ ಈ ರೀತಿ ಇದೆ.

**ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ**
**ಕೇಳಿರಯ್ಯಾ ಎರಡಾಳಿನ ಭಾಷೆಯ**
**ಕೊಲುವೆನೆಂಬ ಭಾಷೆ ದೇವನದು**
**ಗೆಲುವೆನೆಂಬ ಭಾಷೆ ಭಕ್ತನದು**
**ಸತ್ಯವೆಂಬ ಕೂರಲಗನೆ ತಳೆದುಕೊಂಡು**
**ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವಾ.**

ಇದರ ಭಾವಾರ್ಥ – ನವಖಂಡಯುಕ್ತವಾದ ಇಡೀ ಜಗತ್ತಿನಲ್ಲಿಯೇ ಎರಡಾಳಿನ ಭಾಷೆಯನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಕೊಲುವೆನೆಂಬ ಭಾಷೆ ದೇವನದು, ದೇಹದ ಕ್ರಿಯಾದಿಗಳು ನಡೆಯುತ್ತಿರುವುದರಿಂದ ಮಿದುಳಿನಲ್ಲಿ ಇರ್ತಕ್ಕಂಥ ಶಕ್ತಿ ವ್ಯಯವಾಗುತ್ತಲೇ ಇರುತ್ತದೆ – ಇದೇ ದೇವನ ಭಾಷೆಯಾದ ಮರಣ. ಈ ಮರಣವನ್ನು ಗೆಲ್ಲುತ್ತೇನೆ ಎನ್ನುವ ಭಾಷೆ ಭಕ್ತನದು. ಅಂದರೆ ಇಷ್ಟಲಿಂಗದ ಸಾಧನೆಯ ಮೂಲಕ ಮರಳಿ ಚೈತನ್ಯವನ್ನು ಬಾಹ್ಯದಿಂದ ಪಡೆದುಕೊಳ್ಳುತ್ತೇನೆ ಎಂಬುದು.

ಇದರೊಂದಿಗೆ ಮುಖ್ಯವಾದುದು ವೈಜ್ಞಾನಿಕ ಅರಿವು. ಜಂಬೂದ್ವೀಪ ಎಂದರೆ ಸಪ್ತದ್ವೀಪಗಳಲ್ಲಿ ಒಂದು (1) ಭಾರತ (ಭರತ ವರ್ಷ) ಹಾಗೂ ಸುತಮುತ್ತಣ ದೇಶಗಳು, (2) ಪ್ಲಾಕ್ಷ, (3) ಷಾಲ್ಮಲಿ, (4) ಕುಷ, (5) ಕ್ರೌಂಚ, (6) ಷಾಕ ಮತ್ತು (7) ಪುಷ್ಕರ ಎಂಬ ಈ ಎಲ್ಲಾ ದ್ವೀಪಗಳನ್ನು ವೈಜ್ಞಾನಿಕ ಅಧ್ಯಯನದ ನಂತರ ಪದ್ಮಭೂಷಣ ಪ್ರೊ॥ ಕೆ.ಎಸ್. ವಲ್ದಿಯಾ ಎಂಬ ವಿಜ್ಞಾನಿ ತಮ್ಮ 2012ರ, 244 ಪುಟಗಳ ವಿಜ್ಞಾನ ಪುಸ್ತಕ "Geology, Peoples and Geodynamics of India in Purans and Epics – A Geologist's Interpretation"ದಲ್ಲಿ ಧೃಡಪಡಿಸಿದ್ದಾರೆ (ಚಿತ್ರ–1).

ಶರಣರು ಉಲ್ಲೇಖಿಸುವ ನವಖಂಡಗಳು – (1) ಭರತವರ್ಷ, (2) ಕಿಂಪುರುಷವರ್ಷ, (3) ಹರಿವರ್ಷ, (4) ಇಳಾವರ್ತವರ್ಷ, (5) ರಮ್ಯಕವರ್ಷ, (6) ಹಿರಣ್ಮಯವರ್ಷ, (7) ಕುರುಖಂಡವರ್ಷ, (8) ಭದ್ರಾಶ್ವವರ್ಷ ಮತ್ತು (9)







ಕೇತುಮಾಲಾವರ್ಷ ಎಂಬ 9 ಖಂಡಗಳನ್ನು ಇದೇ ವಿಜ್ಞಾನಿ ಖಚಿತವಾಗಿ ಧೃಡಪಡಿಸಿದ್ದಾರೆ (ಚಿತ್ರ–2). ಇಷ್ಟೇ ಅಲ್ಲದೆ ಜಂಬೂದ್ವೀಪದ ವಿಸ್ತೀರ್ಣ, ಶಿಲಾಪದರ, ಜಲಕವಚ, ಮುಂತಾದ ಅಂಶಗಳು ಉಲ್ಲೇಖಿತ ವಿಜ್ಞಾನ ಪುಸ್ತಕ ಇದಾಗಿದೆ.

## 2. ಇಷ್ಟಲಿಂಗದ ಹಿಂದಿನ ವಿಜ್ಞಾನ (Physical Chemistry)

ಅಪ್ಪ ಬಸವಣ್ಣನವರು ಕರುಣಿಸಿದ ಇಷ್ಟಲಿಂಗದ ತಯಾರಿಕೆಯಲ್ಲಿಯೂ ವೈಜ್ಞಾನಿಕ ಅಂಶಗಳು ಅಡಕವಾಗಿವೆ. ಮೊದಲನೆಯದಾಗಿ ಲಿಂಗ (ಪೀಠ ಲಿಂಗ) ತಯಾರಿಕೆಗೆ ಚಂದ್ರಕಾಂತ ಶಿಲೆ (ಸಿಲಿಕಾನ್) ಬಳಸಲಾಗುವುದು. ಪ್ರಖ್ಯಾತ ತತ್ವಜ್ಞಾನಿ ಅರಿಸ್ಟಾಟಲ್ ಕೂಡಾ 'ಕಾಂತಶಿಲೆಯಲ್ಲಿ ಆತ್ಮನಿದ್ದಾನೆ' ಎಂದು ಹೇಳಿದ್ದಾರೆ. ಅಲ್ಲದೆ ಎರಡನೆಯದಾಗಿ ಬ್ರಹ್ಮಾಂಡ ಆಕಾರದ ಕಪ್ಪು ಬಣ್ಣದ ಹೊರಕವಚದಲ್ಲಿಯೂ (ಕಂತೆ/ಚದ್ರಸಾ) ವಿವಿಧ ರಾಸಾಯನಿಕಗಳು ಬಳಕೆಯಾಗುತ್ತವೆ. ಅವು ಯಾವುವೆಂದರೆ

| | | |
|---|---|---|
| ಅರಗು | → | **Shell-lac** |
| ರಾಳ | → | **Sol** |
| ಇಂಗಳೀಕ | → | **Cinneba-Hgs** |
| ಶಿಲಾರಸ | → | **Liquid Storax** |
| ರುಮಾಮಸಕ್ತಿ | → | **Resin of a tree** |
| ಅಂಜನಗಳು | → | **Collyrium** |
| ತುಪ್ಪದ ಕಾಡಿಗೆ | → | **Lamp black** |
| ಗೇರು ಎಣ್ಣೆ | → | **Marking nut** |

ಇಲ್ಲಿ ಭೌತ ರಸಾಯನ ಶಾಸ್ತ್ರ (Physical Chemistry) ಬಳಕೆಯಾಗಿರುವುದು ವೇದ್ಯವಾಗುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಶರಣರ ವೈಜ್ಞಾನಿಕ ದೃಷ್ಟಿ ಉನ್ನತ ಮಟ್ಟದ್ದು ಆಗಿತ್ತು.

**ವಚನಗಳು ಮೊದಲು ಅನುಭಾವ ಮಂಟಪದಲ್ಲಿ ಚರ್ಚಿಸಲ್ಪಟ್ಟು ನಂತರವೇ ಅನುಮೋದಿಸಲಾಗುತ್ತಿದ್ದವು. ಆದ್ದರಿಂದಲೇ "ವಚನಗಳು ಅನುಭಾವ ಮಂಟಪದ ಅಗ್ಗಿಷ್ಟಿಕೆಯಿಂದ ಹೊರಬಂದ ಪುಟವಿಟ್ಟ ಚಿನ್ನದಂತೆ" ಎಂಬುದು ಸರ್ವಕಾಲಿಕ ಸತ್ಯ**

**ಚ. ವೇದಮೂರ್ತಿ**
**ಮುಖ್ಯ ಸಂಚಾಲಕರು, ಮಹಾಜಗದ್ಗುರು ಬಸವಣ್ಣ ಧರ್ಮಾರ್ಥ ದತ್ತಿ (ರಿ)**
**ಬಸವ ಧರ್ಮ ಪೀಠದ ಶರಣ ಸೇವಾ ರತ್ನ ಪುರಸ್ಕೃತರು**

## ಜ್ಞಾನಸಿಂಧು, ವಿಶ್ವಬಂಧು

ಮಾತೆ ಮಹಾದೇವಿಯನು ಘನ ಸಂಪನ್ನ ಮನದಿಂ
ಆ ದಿವ್ಯ ಚೇತನಕೆ ನಮಿಸುವೆ ॥ ಪ ॥

ಸಾಹಿತ್ಯದ ವಸಂತದಲಿ ಜ್ಞಾನದ ಬಲದಿಂ
ಭಕ್ತಿ ಶಕ್ತಿಯು ತುಂಬಿ ಹಾಡಿನಲಿದ
ಶಿವ ಕಳೆಯ ಕಾವಿಯ ಲಾಂಛನ ಧರಿಸಿದ
ಅಭಿನವ ಅಕ್ಕ ಮಹಾದೇವಿಯೆ ॥ 1 ॥

ನಡೆ-ನುಡಿಗಳಲ್ಲಿ ಬಸವ ನಾಮವ ಹೊತ್ತು
ಹೃದಯದಿಂ ಹೊಮ್ಮಿದುದೆಲ್ಲ ಶಿವವಾಣಿಯು
ಎಡರು ತೊಡರುಗಳೆಂಬ ಮುಳ್ಳು ಕಲ್ಲುಗಳ ಮಧ್ಯೆ
ಧರ್ಮಕಾಗಿ ದಿಟ್ಟ ಅಡಿಯನಿಟ್ಟೆ ॥ 2 ॥

ಆಧ್ಯಾತ್ಮ ಪಥದಲಿ ನಡೆ-ನುಡಿಗಳೊಂದ ಮಾಡಿ
ಸವೆಸಿದಿರಿ ಲೋಕದೇಳಿಗೆಗೆ ತನುಮನವ
ಇವನಾರೆನ್ನದೆ ಸರ್ವರನು ಕರೆದು,
ಎತ್ತಿ ಹಿಡಿದಿರಿ ಬಸವ ತತ್ವದ ಘನತೆಯನು ॥ 3 ॥

ಮನಗಳಿಗಂಟಿದ ಮೌಢ್ಯದ ಕೊಳೆಯನು
ವಾಣಿಯಿಂ ತೊಳೆದ ಶ್ರೀ ವಾಗ್ದೇವಿಯೆ
ವೈಭವಕೆ ನೆಲೆಯಿಲ್ಲ; ಸರಳತೆಗೆ ಬೆಲೆಯಿಹುದು
ವೈಚಾರಿಕ ಪ್ರಜ್ಞೆಯ ಕಾಂರಜಿಯೆ! ॥ 4 ॥

ಕತ್ತಲಾವರಿಸಿದ ಲೋಕದಡವಿಯಲಿ
ಬೆಳಕನು ಬಿತ್ತಿದ ಮಿಂಚುಹುಳುವೆ
ನುಡಿ ನುಡಿಗಳಲ್ಲಿ ಹೊಸ ಹೊಳಪನೀಯ್ದ
ಜ್ಞಾನಸಿಂಧುವೆ, ವಿಶ್ವ ಬಂಧುವೆ! ॥ 5 ॥

ದಿವ್ಯ ಯೋಗಿಣಿಯಹುದು, ಬಸ ಭಾಮಿನಿಯಹುದು
ತ್ಯಾಗ ಜೀವನದ ಸಂಜೀವಿನಿ
ಬಾಳಪುಷ್ಪವನು ಬಸವ ಸೇವೆಗರ್ಪಿಸಿದ
ನಿಮಗೆನ್ನ ಸಾವಿರದ ಶರಣಾರ್ಥಿ ತಾಯೆ ॥ 6 ॥

– ಎಂ.ಆರ್. ಶ್ರೀಕಾಂತ
ಯರಬಾಗ, ತಾ.ಬ.ಕಲ್ಯಾಣ







ಮಾತಾಜಿ ಅವರ
71ನೇ ವರ್ಧಂತಿಯ
ಮಹೋತ್ಸವದ
ನೋಟಗಳು




## ಕಲ್ಯಾಣ ಕಿರಣ
## ತಿಂಗಳ ನೋಟ









Registered with Registrar of News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post the Printed Magazine without Prepayment (WPP-17). Posted at Bengaluru PSO. Mysuru Road (Bg-560026) on 3rd, 10th, 20th of every month. Pages 32+4 (Cover Pages)